ಜನಪದ ವಿಚಾರ

ಸಂಪುಟ ೧೮
ಏಪ್ರಿಲ್ ೨೦೧೮
ಸಂಚಿಕೆ ೯

ದಯವಿಲ್ಲದ ಧರ್ಮವದೇವುದಯ್ಯ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ!
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ

ಈ ಸಂಚಿಕೆಯಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಪತ್ರಿಕೆ

ಏಪ್ರಿಲ್ - ೨೦೧೮
ಸಂಪುಟ - ೧೮
ಸಂಚಿಕೆ - ೯

ಸಂಪಾದಕರು
ಸಂತೋಷ್ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೩೦೦/-

ಸಂಪರ್ಕವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ - ೫೭೧೪೩೧
ಮಂಡ್ಯ ಜಿಲ್ಲೆ

ದೂರವಾಣಿ
೦೨೩೬ ೨೯೯೮೫೪
೭೮೨೯೪೮೯೧೪೭

Email : janapada@yahoo.com
web : janapada.org

ತಿಂಗಳ ಕವನ

ಬಸವಣ್ಣನವರ ನಾಲ್ಕು ವಚನಗಳು

ವಿಷಯವೆಂಬ ಹಸುರನೆನ್ನಮುಂದೆ ತಂದು
ಪಸರಿಸಿದೆಯಯ್ಯಾ ಹಸುವೇನ ಬಲ್ಲುದು?
ಹಸುರೆಂದೆಳಸುವುದು ವಿಷಯರಹಿತನ ಮಾಡಿ,
ಭಕ್ತಿರಸವ ದಣಿಯೆ ಮೇಯಿಸಿಸುಬುದ್ಧಿಯೆಂಬ
ಉದಕವನೆರೆದುನೋಡಿ ಸಲಹಯ್ಯಾ,
ಕೂಡಲಸಂಗಮದೇವಾ.

ಏನು ಬಂದಿರಿ ಹದುಳವಿದ್ದಿರೆ - ಎಂದಡೆ
ನಿಮ್ಮ ಮೈಸಿರಿ ಹಾರಿಹೋಹುದೆ?
ಕುಳ್ಳಿರೆಂದರೆ ನೆಲ ಕುಳಿಹೋಹುದೆ?
ಒಡನೆ ನುಡಿದಡೆ ಸಿರಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಕೆಡಹಿ ಮೂಗಕೊಯ್ಯದೆ ಮಾಣ್ಬನೆ
ಕೂಡಲಸಂಗಮದೇವಾ.

ದೇವಲೋಕ-ಮರ್ತ್ಯಲೋಕವೆಂಬುದು ಬೇರಿಲ್ಲ
ಕಾಣಿರಣ್ಣ, ಸತ್ಯವ ನುಡಿವುದೇ ದೇವಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ, ಅನಾಚಾರವೇ ನರಕ
ನೀವೇ ಪ್ರಮಾಣ ಕೂಡಲಸಂಗಮದೇವಾ.

ಎನ್ನ ಕಾಯವ ದಂಡಿಗೆಯ ಮಾಡಯ್ಯಾ
ಎನ್ನ ಸಿರವ ಸೋರೆಯ ಮಾಡಯ್ಯಾ
ಎನ್ನ ನರವ ತಂತಿಯ ಮಾಡಯ್ಯಾ
ಎನ್ನ ಬೆರಳ ಕಡ್ಡಿಯ ಮಾಡಯ್ಯಾ
ಬತ್ತೀಸರಾಗವ ಹಾಡಯ್ಯಾ, ಉರದಲೊತ್ತಿ
ಕೂಡಲಸಂಗಮದೇವಾ.

ನಿಮ್ಮೊಂದಿಗೆ

ಏಪ್ರಿಲ್ ಮಾಹೆಯ ಸಂಚಿಕೆಯನ್ನು ತಮ್ಮ ಕೈಯಲ್ಲಿಡಲು ಸಂತೋಷವೆನಿಸುತ್ತಿದೆ.

ಕಳೆದ ಕೆಲವು ಸಂಚಿಕೆಗಳಿಂದ ಜನಪದ ವಿಚಾರದ ವಿನ್ಯಾಸದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ತಾವು ಗಮನಿಸದ್ದೀರಿ. ಬದಲಾವಣೆಗಳು ನಿಮಗೆ ಇಷ್ಟವಾಗಿದೆ ಎಂದು ಭಾವಿಸುತ್ತೇವೆ. ಹಲವು ಜನ ಓದುಗರು ಬದಲಾವಣೆಯನ್ನು ಮೆಚ್ಚಿ ತಮ್ಮ ಅನಿಸಿಕೆಯನ್ನು ತಿಳಿಸಿದ್ದಾರೆ. ಅವರೆಲ್ಲರಿಗೂ ನಮ್ಮ ವಂದನೆಗಳು. ಇಂದಿನ ಪರಿಸ್ಥಿತಿಯಲ್ಲಿ ಜನಪದವಾದ ವೈಚಾರಿಕ ಪತ್ರಿಕೆಯೊಂದನ್ನು ಹೊರ ತರಲು ಇರುವ ಸವಾಲುಗಳು ನಿಮ್ಮಂತಹ ಪ್ರಜ್ಞಾವಂತ ಓದುಗರಿಗೆ ಅರಿವಿದೆ. ಒಂದಿಷ್ಟು ಅತ್ತಿತ್ತವಾಲಿದರೂ ಎತ್ತಲೋ ಹೋಗಿಬಿಡುವ ಸಂಭವವೇ ಹೆಚ್ಚಾಗಿದೆ. ಜನಪದ ವಿಚಾರಕ್ಕಿರುವ ಪರಂಪರೆಯನ್ನು, ಮೌಲ್ಯಗಳನ್ನು ಉಳಿಸಿಕೊಂಡು ಪ್ರಚಲಿತ ವಿದ್ಯಾಮಾನಕ್ಕೆ ಪ್ರತಿಕ್ರಿಯಿಸಲು ಜನಪದ ವಿಚಾರ ಪ್ರಯತ್ನಿಸುತ್ತಿದೆ. ಹೊಸ ಬರಹಗಾರರ ಬಳಗವನ್ನು ಹುಟ್ಟುಹಾಕುವ ಕೆಲಸವೂ ನಡೆದಿದೆ. ಪ್ರತಿ ಮಾಹೆಯೂ ಒತ್ತಡಗಳ ನಡುವೆ ಪತ್ರಿಕೆ ಸುಂದರವಾಗಿ ಮೂಡಿ ಬಂದಾಗ ಧನ್ಯತೆಯ ಭಾವ ಮೂಡುತ್ತದೆ.

ಈ ತಿಂಗಳಿನಿಂದ ಎರಡು ಹೊಸ ಅಂಕಣಗಳನ್ನು ಪ್ರಾರಂಭಿಸಿದ್ದೇವೆ. ಶ್ರಿ ಕೆ.ವೆಂಕಟರಾಜು ಅವರು ಗಾಂಧೀಯ ಅರ್ಥಶಾಸ್ತ್ರಜ್ಞ ಮತ್ತು ಇಂದು ಯುವಜನರ ಗಮನ ಸೆಳೆದಿರುವ ಜೆ.ಸಿ.ಕುಮಾರಪ್ಪನವರ ವಿಚಾರಗಳನ್ನು 'ಕುಮಾರಪ್ಪ ಚಿಂತನೆ " ಅಂಕಣಕ್ಕೆ ಬರೆಯಲಿದ್ದಾರೆ. ಶ್ರೀ ಜಗದೀಶ ಕೊಪ್ಪ ಅವರು ಮಹಾತ್ಮ ಗಾಂಧಿಯವರ ಹಿರಿಯ ಮಗ, ಅಪ್ಪನ ವಿಚಾರಕ್ಕೆ ತದ್ವಿರುದ್ಧಾಗಿ ಬದುಕಿದ್ದರಿಂದಲೇ ಎಲ್ಲರ ಗಮನ ಸೆಳೆದವರು ಹರಿಲಾಲ್ ಗಾಂದಿ. ಚಂದೂಲಾಲ್ ಜೈನ್ ಅವರು ಬರದಿರುವ 'ಗಾಂಧಿ ಕಳೆದು ಕೊಂಡ ಹರಿಲಾಲ್ ಎಂಬ ರತ್ನ'; ಪುಸ್ತಕದ ಭಾವಾನುವಾದವನ್ನು, 'ಹರಿಲಾಲ್ ಗಾಂಧಿ ಕಥನ' ಸರಣಿಯಲ್ಲಿ ಬರೆಯಲಿದ್ದಾರೆ.

ಈ ಸಂಚಿಕೆ ಸುಂದರವಾಗಿ ಹೊರಬರಲು ನೆರವಾದ ಎಲ್ಲಾ ಲೇಖಕರಿಗೂ, ಕಲಾಕಾರರಿಗೂ ವಂದನೆಗಳು.

ಬಸವ ತತ್ವದ ನಿಜ ಅನುಯಾಯಿ ಗಾಂಧಿ

– ಬಿ.ಆರ್.ಪ್ರಾಣೇಶರಾವ್

(ಗಾಂಧಿ ಚಿಂತಕರಾಗಿದ್ದ ದಿ. ಬಿ.ಆರ್.ಪ್ರಾಣೇಶರಾವ್ ಅವರ ಪುಸ್ತಕದಿಂದ ಆಯ್ದ ಲೇಖನ)

ಭಾರತೀಯ ಸಂಸ್ಕೃತಿ ಅವಿಚ್ಛಿನ್ನ ವಾಹಿನಿ; ಅವಿರತವಾಹಿನಿ. ಅದು ಎಂದೂ ನಿಂತ ನೀರಲ್ಲ. ಪರಂಪರಾನುಗತವಾಗಿ ಬಂದ ಅಮೂಲ್ಯವಾದ ಶಾಶ್ವತ ಮೌಲ್ಯಗಳನ್ನು ಅದು ರಕ್ಷಿಸಿಕೊಂಡು ಬಂದಿದೆ. ಸತ್ಯ, ಧರ್ಮ, ದಯೆ, ಪ್ರೇಮ, ಅಹಿಂಸೆ ಮುಂತಾದವು ಶಾಶ್ವತ ಜೀವನ ಮೌಲ್ಯಗಳು, ಪರದೇಶಗಳ ಸಂಸ್ಕೃತಿಯೊಡನೆ ಸಂಪರ್ಕ ಬೆಳೆದಾಗ ಆ ಸಂಸ್ಕೃತಿಗಳ ಉನ್ನತ ಮೌಲ್ಯಗಳನ್ನು ತನ್ನದಾಗಿ ಮಾಡಿಕೊಂಡು ವೈವಿಧ್ಯತೆಯನ್ನು ಮೆರೆದಿರುವುದು ಭಾರತೀಯ ಸಂಸ್ಕೃತಿಯ ಹೆಗ್ಗಳಿಕೆ.

ಭಾರತೀಯ ಸಂಸ್ಕೃತಿಯಲ್ಲಿ ಹಾಗೂ ಸಮಾಜದಲ್ಲಿ ದುಷ್ಟ ಸಂಪ್ರದಾಯಗಳು ತಲೆದೋರಿದಾಗ, ಹಳೆಯ ಮೌಲ್ಯಗಳು ಸವಕಲಾದಾಗ ಅವುಗಳನ್ನು ತೊಡೆದು ಹಾಕುವ ಕೆಲಸ ಕಾಲಕಾಲಕ್ಕೆ ನಡೆದು ಬಂದಿದೆ. ಬೇರೆ ದೇಶಗಳಲ್ಲಿ ಸಮಾಜ ಸುಧಾರಣೆ ಅಥವಾ ಪರಿವರ್ತನೆಗೆ ತೀವ್ರ ಕ್ರಾಂತಿಗಳು, ಹಿಂಸಾತ್ಮಕ ಆಂದೋಲನಗಳು ಅಗತ್ಯವಾಗಿ ಕಂಡುಬಂದಿವೆ. ಆದರೆ ಭಾರತದಲ್ಲಿ ಸಾಮಾಜಿಕ, ರಾಜಕೀಯ ಪರಿವರ್ತನೆಗಳು ಶಾಂತಿಯುತವಾಗಿ ನಡೆದಿರುವುದು ಒಂದು ವೈಶಿಷ್ಟ್ಯ. ಹೀಗೆ ಸುಧಾರಣೆ ಅಥವಾ ಪರಿವರ್ತನೆಗಳನ್ನು ತರುವುದರಲ್ಲಿ ಮೊದಲಿನಿಂದಲೂ ಪ್ರವಾದಿಗಳು, ಸಂತರು, ಸುಧಾರಕರು ಅಪ್ರತಿಮ ಪಾತ್ರ ವಹಿಸಿದ್ದಾರೆ. ಹಳಸಿ ಹೋದ ಮೌಲ್ಯಗಳನ್ನು, ಕುರುಡು ಸಂಪ್ರದಾಯಗಳನ್ನು, ದುಷ್ಟ ಕಟ್ಟಳೆಗಳನ್ನು ಗುರುತಿಸಿ ಅವುಗಳನ್ನು ತೊಡೆದು ಹಾಕಲು ಕಂಕಣಬದ್ಧರಾಗಿದ್ದವರು ಮಹಾತ್ಮರು, ಸಂತರು ಮತ್ತು ಸುಧಾರಕರು. ತಾವು ಕಂಡ ಸತ್ಯವನ್ನು ತಾವು ಒಪ್ಪಿದ ಹೊಸ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತಾವು ಮೊದಲು ಪರಿವರ್ತಿತರಾಗಿ ಇಡೀ ಜನತೆಯನ್ನು ಪರಿವರ್ತನೆಯ ಹಾದಿಗೆ ಎಳೆಯುವುದು ಮಹಾತ್ಮರ ಮಾರ್ಗ. ಇದು ಒಮ್ಮೊಮ್ಮೆ ನಿಧಾನದ ಮಾರ್ಗವೆಂದೂ ಕಂಡರೂ ಇದರ ಫಲ ಶಾಶ್ವತ. ಇದರಿಂದ ಸಮಾಜಕ್ಕೆ ಆಗುವ ಪ್ರಯೋಜನ ಅಮಿತ.

ಈ ರೀತಿಯ ಪರಿವರ್ತನೆಯ ಪ್ರಕ್ರಿಯೆಯಲ್ಲಿ ವ್ಯಕ್ತಿಗೇ ಪಾರಮ್ಯ. ವ್ಯಕ್ತಿಯ ಸುಧಾರಣೆಯಿಂದ ಸಮಾಜದ ಸುಧಾರಣೆ; ಸಾಮಾಜಿಕ ಪರಿವರ್ತನೆ, ಪರಿವರ್ತನೆಯ ಅಗತ್ಯವನ್ನು ಕಂಡ ಮಹಾತ್ಮರು ಹೊಸ ಮೌಲ್ಯಗಳ ಅನುಷ್ಠಾನದಿಂದ ಮೇಲ್ಪಂಕ್ತಿ ಹಾಕುತ್ತಾರೆ; ಕ್ರಾಂತಿದರ್ಶಿಗಳಾಗುತ್ತಾರೆ. ಸಮಾಜದಲ್ಲಿ ವ್ಯಕ್ತಿಗಳು ಹೆಚ್ಚುಹೆಚ್ಚಾಗಿ ನೂತನ ಮೌಲ್ಯಗಳನ್ನು ಒಪ್ಪಿಕೊಂಡು ಅನುಸರಿಸಿದಾಗ ಅವರ ಜೀವನ ಕ್ರಮದಲ್ಲಿ ಮತ್ತು ಜೀವನ ವಿಧಾನದಲ್ಲಿ ಬದಲಾವಣೆಯಾಗುತ್ತದೆ. ಕಡೆಗೆ ಇಡೀ ಸಮಾಜ ಪರಿವರ್ತಿತವಾಗುತ್ತದೆ. ಸದ್ದಿಲ್ಲದೆ ಕ್ರಾಂತಿ ನಡೆದು ಹೋಗುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ವಿಜೃಂಭಿಸಿದ ಇಂತಹ ಶಾಂತಿಯುತ ಕ್ರಾಂತಿಯುತ ಕ್ರಾಂತಿಪಥದ ನಿರ್ಮಾತೃಗಳಲ್ಲಿ ಶ್ರೀ ಬಸವೇಶ್ವರರು ಒಬ್ಬರಾದರೆ

ಇಪ್ಪತ್ತನೇ ಶತಮಾನದಲ್ಲಿ ರಾರಾಜಿಸಿದ ಮಹಾತ್ಮ ಗಾಂಧಿ ಮತ್ತೊಬ್ಬರು.

ಶ್ರೀ ಬಸವೇಶ್ವರರು ಹುಟ್ಟು ಬಂಡಾಯಗಾರರು. ಹನ್ನೆರಡನೆಯ ಶತಮಾನದಲ್ಲಿ ಪ್ರಚಲಿತವಾಗಿದ್ದ ಧಾರ್ಮಿಕ ಅನಾಚಾರ, ಸಾಮಾಜಿಕ ಅನ್ಯಾಯ, ಕುರುಡು ಸಂಪ್ರದಾಯ ಹಾಗೂ ಜಾತೀಯ ಯಜಮಾನಿಕೆ ವಿರುದ್ಧ ಬಂಡಾಯ ಹೂಡಿದರು. ಹುಟ್ಟು ನಾಡಾದ ಕರ್ನಾಟಕ ಅವರ ಕಾಯಕದ ಕ್ಷೇತ್ರ. ಬಿಜ್ಜಳನ ಮಂತ್ರಿಯಾಗಿದ್ದ ಅವರು ಸಾಮಾಜಿಕ ಸ್ಥಿತಿಗತಿಗಳನ್ನು ಕ್ಷಕಿರಣದಿಂದ ನೋಡಿ ಸಮಾಜದ ಸಮಸ್ತ ಸುಧಾರಣೆಗೆ ಹಾಗೂ ಪರಿವರ್ತನೆಗೆ ಅವಿರತವಾಗಿ ದುಡಿದರು.

ಹಲವು ಹತ್ತು ದೇವರು ದಿಂಡರುಗಳ ಆರಾಧನೆ ಹಾಗೂ ಮೂಢನಂಬಿಕೆಗಳಿಂದ ಗೋಜಲುಮಯವಾಗಿದ್ದ ಧಾರ್ಮಿಕ ಜೀವನದ ಪುನರುತ್ಥಾನಕ್ಕೆ ಕೈ ಹಾಕಿದವರು ಬಸವಣ್ಣನವರು. ಭಗವಂತನ ಏಕಮೇವಾದ್ವಿತೀಯ ಜನರೆಲ್ಲರೂ ಆತನ ಮಕ್ಕಳು. ಆದುದರಿಂದ ಎಲ್ಲರೂ ಸಹೋದರರು ಎಂಬ ಭಾವನೆಯನ್ನು ಬಿತ್ತರಿಸಿದರು. ಭಗವಂತನಲ್ಲಿ ಸಮರ್ಪಣಾ ಭಾವದ ಭಕ್ತಿಯೇ ಮುಕ್ತಿಗೆ ಮಾರ್ಗ; ಮಾನವ ಸೇವೆ ಭಗವಂತನ ಸಾಕ್ಷಾತ್ಕಾರದ ಸಾಧನ ಎಂದು ಸಾರಿದರು. ಆ ದಿಸೆಯಲ್ಲಿ ಕಾಯಕ ಮಾಡಿದರು. ಜಾತಿ, ವರ್ಗ, ಲಿಂಗಭೇದವಿಲ್ಲದೆ ಎಲ್ಲರೂ ಒಂದೇ ಎಂಬ ತತ್ವವನ್ನು ಪ್ರತಿಪಾದಿಸಿದರು. ಅವರು ನಡೆಸುತ್ತಿದ್ದ 'ಅನುಭವ ಮಂಟಪ' ಅವರ ವಿಚಾರಗಳ ಮೂರ್ತಿವೆತ್ತ ವೇದಿಕೆಯಾಗಿತ್ತು.

ಬಸವಣ್ಣನವರಂತೆ ಗಾಂಧಿಯವರೂ ಭಗವಂತನ ಏಕತೆಯ ತತ್ವವನ್ನು ಪ್ರತಿಪಾದಿಸಿದರು. ಗಾಂಧಿಯವರಿಗೆ ಸತ್ಯವೇ ದೇವರು. ದೇವರ ಸೃಷ್ಟಿಗೆ ಒಳಗಾದ ಜೀವರಾಶಿಗಳೆಲ್ಲಾ ಒಂದೇ, ಪ್ರತಿಯೊಂದು ಜೀವವೂ ಪವಿತ್ರವಾದುದು. ಅದುದರಿಂದ ಕಾಯೇನ ವಾಚಾ ಮನಸಾ ಯಾವ ಜೀವಕ್ಕೂ ಹಿಂಸೆ ಮಾಡಬಾರದು. ಹಿಂಸೆ ಮಾಡಿದರೆ ಭಗವಂತನಿಗೆ ಅಪಚಾರ ಮಾಡಿದಂತೆ ಎಂದರು ಗಾಂಧಿ.

ಬಸವಣ್ಣನವರು 'ದಯೆ' ಧರ್ಮದ ಮೂಲವೆಂದರೆ ಗಾಂಧಿ ' ಪ್ರೇಮ' ಜೀವನದ ಸೂತ್ರ ಎಂದರು. ಸತ್ಯ, ಅಹಿಂಸೆ, ಅಸಂಗ್ರಹ ಅಭಯ, ಸಮಾನತೆ, ನೀತಿ– ಈ ಇಬ್ಬರೂ ಮಹಾತ್ಮರುಗಳೂ ಒಪ್ಪಿಕೊಂಡು ಅನುಷ್ಠಾನ ಮಾಡಿದ ಮೌಲ್ಯಗಳು.

ವರ್ಣ ಮತ್ತು ಜಾತಿ ಪದ್ಧತಿಯ ಉಗ್ರ ವಿರೋಧಿಗಳು ಬಸವೇಶ್ವರರು. 'ದುಡಿಮೆಯ ವಿಭಜನೆ'ಯ 'ವೈಜ್ಞಾನಿಕ ಬುನಾದಿ' ಯ ಮೇಲೆ ಆರಂಭವಾದ ವರ್ಣವ್ಯವಸ್ಥೆಯನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಗಾಂಧೀಜಿ ಸಮರ್ಥಿಸಿದ್ದುಂಟು. ಆದರೆ ಪ್ರಸ್ತುತ ಜಾತಿ ವ್ಯವಸ್ಥೆಗೂ ಹಿಂದಿನ ವರ್ಣ ವ್ಯವಸ್ಥೆಯ ಕಲ್ಪನೆಗೂ ಅಜಗಜಾಂತರ ಎಂದು ಗಾಂಧಿ ಹೇಳಿದರು. ಇಂದಿನ ಜಾತಿ ವ್ಯವಸ್ಥೆ ವರ್ಣ ವ್ಯವಸ್ಥೆಯ ವಿಕೃತ ರೂಪ. ಆದುದರಿಂದ ಜಾತಿ ಪದ್ಧತಿ ನಿರ್ಮೂಲವಾಗಬೇಕು ಎಂದು ಗಾಂಧಿ ಹೇಳಿದರು. ಜಾತಿ ರಹಿತ, ವರ್ಗ ರಹಿತ, ಸಮಾಜದ ಕಲ್ಪನೆಯನ್ನು ಬಾಪು ಮುಂದಿಟ್ಟರು.

ಬಸವಣ್ಣನವರು ಹಾಗೂ ಗಾಂಧಿಯವರು ಪ್ರತಿಪಾದಿಸಿದ ಕ್ರಾಂತಿಕಾರಿ ಮೌಲ್ಯ, ಕಾಯಕದ ಮೌಲ್ಯ. 'ಕಾಯಕವೇ ಕೈಲಾಸ' ಎಂದರು ಬಸವೇಶ್ವರರು. 'ಅನ್ನದ ಕಾಯಕ'ದ ಮಹತ್ವವನ್ನು ಎತ್ತಿ ಹಿಡಿದರು ಗಾಂಧಿ. ಬದುಕಿನಲ್ಲಿ ದೇಹದ ಪರಿಶ್ರಮಕ್ಕೆ ನೀಡಬೇಕಾದ ಪ್ರಾಮುಖ್ಯತೆಯನ್ನು ಇಬ್ಬರೂ ಒತ್ತಿ ಹೇಳಿದರು. ಬಸವೇಶ್ವರರ ಸಮಕಾಲೀನ ಸಮಾಜದಲ್ಲಿ ಮೇಲು ಕೀಳು ಭಾವನೆಗಳು ತುಂಬಿ ತುಳುಕಾಡುತ್ತಿದ್ದವು. ವ್ಯಕ್ತಿಯು ಮಾಡುತ್ತಿದ್ದ ಉದ್ಯೋಗಕ್ಕೆ ಅನುಗುಣವಾಗಿ ಅವನ ಸಾಮಾಜಿಕ

ಸ್ಥಾನ ನಿರ್ಣಯವಾಗುತ್ತಿತ್ತು. ಗಾಂಧಿಯವರ ಕಾಲದಲ್ಲೂ ಅಷ್ಟೆ, ಜಾತಿ ಮತ್ತು ವರ್ಗನಿಬಿಡವಾದ ಭಾರತದಲ್ಲಿ ಅಷ್ಟೇ ಅಲ್ಲ, ಮುಂದುವರೆದ ರಾಷ್ಟ್ರಗಳ ಸಮಾಜ ರಚನೆಯಲ್ಲೂ ವರ್ಗಗಳನ್ನಾಧರಿಸಿ ಮೇಲು ಕೀಳು ಭಾವನೆಗಳು ತಾಂಡವವಾಡುತ್ತಿವೆ. ಈ ಮೇಲು-ಕೀಳು ಭಾವನೆಗಳು ತೊಲಗಿ ಸಾಮಾಜಿಕ ಸಮಾನತೆ ಮೂಡಬೇಕಾದರೆ ಎಲ್ಲ ವೃತ್ತಿ ಉದ್ಯೋಗಗಳಿಗೂ ಸಮಾನ ಗೌರವ ಕೊಡುವ ಪ್ರವೃತ್ತಿ ಬರಬೇಕು. ದುಡಿಮೆಯ ಘನತೆಯ ಮೌಲ್ಯ ರಕ್ತಗತವಾಗಬೇಕು ಎಲ್ಲಿಯವರಗೆ ಈ ಮೌಲ್ಯದ ಅಂಗೀಕಾರವಿರುವುದಿಲ್ಲವೋ ಅಲ್ಲಿಯವರಗೆ ಸಾಮಾಜಿಕ ಅಸಮಾನತೆ, ಅನ್ಯಾಯ, ಶೋಷಣೆ ಇದ್ದೇ ಇರುತ್ತದೆ. ದುಡಿಮೆಯ ಘನತೆಯ ಮೌಲ್ಯ ರಾಷ್ಟ್ರ ಜೀವನದ ಪ್ರಧಾನ ಮೌಲ್ಯವಾಗಬೇಕು, ವಿಶ್ವ ಮಾನವ ತತ್ವವಾಗಬೇಕು.

ಅನ್ನದ ಕಾಯಕ ಎಂದರೆ ಪ್ರತಿಯೊಬ್ಬನೂ ತನ್ನ ಅಗತ್ಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೈಲಾದ ಮಟ್ಟಿಗೂ ದೇಹ ಶ್ರಮ ಪಡಬೇಕು. ಶರೀರ ಶ್ರಮದ ವ್ರತವನ್ನು ಸಾರ್ವತ್ರಿಕವಾಗಿ ಸ್ವೀಕರಿಸಿದರೆ ಸಮಾಜದಲ್ಲಿ ಎಲ್ಲ ರೀತಿಯ ದುಡಿಮೆಗೂ ಸಮಾನ ಗೌರವ ದೊರೆಯುತ್ತದೆ. ಬಸವಣ್ಣನವರು ಅನ್ನ ಕಾಯಕ ತತ್ವವನ್ನು ಆಧ್ಯಾತ್ಮಿಕ ತತ್ವವನ್ನಾಗಿಯೇ ಕಂಡರು. ಪ್ರತಿಯೊಬ್ಬನೂ ತನ್ನ ಜೀವನಕ್ಕಾಗಿ ಶ್ರಮಪಟ್ಟು ದುಡಿಯಲೇಬೇಕು ದುಡಿದು ಉತ್ಪಾದಿಸಿದ್ದನ್ನು 'ದಾಸೋಹ' ಮಾಡಬೇಕು. ಜಂಗಮರಿಗೆ ಕೊಟ್ಟು ತಾನೂ ಭುಂಜಿಸಬೇಕು ಎಂದರು.

ಶರೀರಶ್ರಮ ಸಾಮಾಜಿಕ ಸಮಾನತೆಯನ್ನು ಬೆಸೆಯುವ ಸಾಧನ. ಅಂದಿನ ಸಾಮಾಜಿಕ ಪರಿಸರದಲ್ಲಿ ಸಮಾನತೆಯ ಸಿದ್ಧಿಯನ್ನು ಬಸವಣ್ಣನವರು ತೋರಿಸಿ ಕೊಟ್ಟರು. ಅನುಭವ ಮಂಟಪದಲ್ಲಿ ತೋಟಿ, ಮಡವಾಳ, ಬಡಗಿ, ಕುಂಬಾರ ಮತ್ತೆಲ್ಲ ರೀತಿಯ ಉದ್ಯೋಗಗಳನ್ನು ಅವಲಂಬಿಸಿದವರೂ ಉದ್ಯೋಗ ಭೇದ ಇಲ್ಲದೆ, ಲಿಂಗಭೇದವಿಲ್ಲದೆ ಸಮಾನವಾಗಿ ಕುಳಿತು ಉನ್ನತ ಆಧ್ಯಾತ್ಮಿಕ ವಿಚಾರಗಳನ್ನು ಚರ್ಚಿಸುವಷ್ಟರ ಮಟ್ಟಿಗೆ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಔನತ್ಯವನ್ನು ಸಾಧಿಸಿದ್ದರು. ಅನ್ನ ಕಾಯಕದ ಅನುಷ್ಠಾನದ ಪರಮೋಚ್ಚ ಸಾಧನೆ ಅದಾಗಿತ್ತು.

ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಸಂಜಾತರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುತ್ತಿದ್ದ ಕಾಲದಲ್ಲೇ ಅನ್ನ ಕಾಯಕದ ಮಹತ್ವವನ್ನು ಅರಿತುಕೊಂಡರು. ಟಾಲ್‌ಸ್ಟಾಯ್ ಕೃತಿಗಳಿಂದ ಈ ತತ್ವದ ಮಹತ್ವ ಅವರಿಗೆ ತಿಳಿಯಿತು. ನಂತರ ರಸ್ಕಿನ್‌ನ 'ಅನ್ ಟು ದಿಸ್ ಲಾಸ್ಟ' ಗ್ರಂಥ ಓದಿದ ಮೇಲೆ ಗಾಂಧೀಯವರ ಜೀವನ ಮಾರ್ಗವೇ ಬದಲಾಯಿತು. ಗಾಂಧಿಯವರ ಅಂತರಾಳದಲ್ಲಿ ಹುದುಗಿದ್ದ ಮುಖ್ಯ ಅನಿಸಿಕೆಗಳೆಲ್ಲಾ ರಸ್ಕಿನ್‌ನ ಗ್ರಂಥದಲ್ಲಿ ಪ್ರತಿಬಿಂಬಿತವಾಗಿದ್ದವು. ರಸ್ಕಿನ್ ಪ್ರತಿಪಾದಿಸಿದ ಸೂತ್ರಗಳು ಗಾಂಧಿಯವರ ಜೀವನ ಸೂತ್ರಗಳಾದವು.

ಆ ಸೂತ್ರಗಳೇ ಸರ್ವೋದಯ ಸಿದ್ಧಂತದ ತಿರುಳಾಯಿತು. ಅವರು ಆಫ್ರಿಕಾದಲ್ಲಿ ತಮ್ಮ ವಕೀಲ ವೃತ್ತಿಯನ್ನು ಕೈ ಬಿಟ್ಟರು. ಫೀನಿಕ್ಸ್ ಆಶ್ರಮ ಪ್ರಾರಂಭಿಸಿದರು. ದೇಹ ಶ್ರಮದ ಆಧಾರದ ಮೇಲೆ ಆಶ್ರಮವಾಸಿಗಳು ಜೀವನ ನಡೆಸುವ ಹಾಗೂ ಸಾರ್ವಜನಿಕ ಕಾರ್ಯಗಳಿಗೆ ಜೀವನವನ್ನು ಮುಡುಪಾಗಿಡುವ ಪರಪಾಠ ಮೊದಲಾಯಿತು.

ಭಾರತಕ್ಕೆ ವಾಪಸಾದ ಮೇಲೆ ಸಹ ಗಾಂಧಿಯವರು ಸ್ಥಾಪಿಸಿದ ಆಶ್ರಮಗಳಲ್ಲಿ ದೇಹಶ್ರಮಕ್ಕೆ ಅರ್ಥಾತ್ ಅನ್ನ ಕಾಯಕ ತತ್ವಕ್ಕೆ ಪೂರ್ಣ ಮಾನ್ಯತೆ ಕೊಡಲಾಗಿತ್ತು. ಆಶ್ರಮದ ಎಲ್ಲ ಕೆಲಸ ಕಾರ್ಯಗಳಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕಿತ್ತು. ಶೌಚಾಲಯವನ್ನು ಶುಚಿ ಮಾಡುವುದರಿಂದ

ಹಿಡಿದು ಅಡಿಗೆ ಮನೆ ಕೆಲಸದವರಗೆ ಎಲ್ಲರಿಗೂ ಸಮಾನ ಹಂಚಿಕೆ ಇರುತ್ತಿತ್ತು. ಹೀಗಾಗಿ ಎಲ್ಲರ ಕೆಲಸ ಕಾರ್ಯಗಳಿಗೂ ಸಮಾನ ಗೌರವವಿತ್ತು. ಶರೀರ ಶ್ರಮವು ಆಶ್ರಮದ ಜೀವನದ ಏಕಾದಶ ಸೂತ್ರಗಳಲ್ಲಿ ಒಂದಾಗಿತ್ತು. ಬ್ರಿಟಿಷ್ ಪ್ರಭುತ್ವದ ಕಾನೂನನ್ನು ಉಲ್ಲಂಘಿಸಿ ವಿಚಾರಣೆಗೊಳಗಾಗಿದ್ದ ಸಂದರ್ಭದಲ್ಲಿ 'ನಿಮ್ಮ ವೃತ್ತಿ ಏನು ?' ಎಂದು ಗಾಂಧಿಯವರನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. 'ನಾನೊಬ್ಬ ಕೃಷಿಕ ಮತ್ತು ನೇಕಾರ' ಎಂದು ಗಾಂಧಿ ಉತ್ತರಿಸಿದ್ದರು.

'ದುಡಿಯದೆ ತಿನ್ನುವವನೇ ಕಳ್ಳ' ಎಂದರು ಗಾಂಧೀ. ನ್ಯಾಯವಾದಿಯಾಗಲೀ, ವೈದ್ಯನಾಗಲೀ, ಬರಹಗಾರನಾಗಲೀ ಪ್ರತಿಯೊಬ್ಬನೂ ತನ್ನ ಜೀವನ ನಿರ್ವಹಣೆಗೆ ಸಾಧ್ಯವಾದಷ್ಟೂ ಶರೀರಶ್ರಮ ಮಾಡಬೇಕು ಎಂದು ಗಾಂಧಿ ಒತ್ತಿ ಹೇಳಿದರು. ಶರೀರ ಶ್ರಮದಿಂದಲೇ ಮಾನವರೆಲ್ಲರೂ ಪರಸ್ಪರ ಸಾಂಗತ್ಯ ಮತ್ತು ತಾದ್ಯಾತ್ಮ ಭಾವನೆಯನ್ನು ಮೂಡಿಸಿಕೊಳ್ಳಲು ಸಾಧ್ಯ ಎಂದು ಗಾಂಧಿ ಭಾವಿಸಿದ್ದರು. ರವೀಂದ್ರನಾಥ್ ಠಾಕೂರ್ ಮತ್ತು ಸಿ.ವಿ.ರಾಮನ್ ಅಂತಹವರು ಶರೀರಶ್ರಮ ಮಾಡಿ ಸಮಯವನ್ನು ಏಕೆ ವ್ಯರ್ಥಗೊಳಿಸಬೇಕು ? ಬೌದ್ಧಿಕ ಕಾರ್ಯಕ್ಕೆ ಎಲ್ಲ ಸಮಯವನ್ನೂ ಅವರು ಮೀಸಲಾಗಿಡುವುದು ಒಳ್ಳೆಯದಲ್ಲವೇ ? ಎಂದು ಗಾಂಧಿಯವರನ್ನು ಪ್ರಶ್ನಿಸಿದ್ದುಂಟು. ಶರೀರ ಶ್ರಮಮಾಡಿದರೆ ಆ ಮಹಾನ್ ವ್ಯಕ್ತಿಗಳ ಬೌದ್ಧಿಕ ಕೃತಿಗಳಿಗೆ ಇನ್ನೂ ಹೆಚ್ಚಿನ ಮೆರಗು ಮತ್ತು ಮೌಲ್ಯ ಬರುತ್ತದೆ ಎಂದು ಗಾಂಧಿ ಉತ್ತರ ಕೊಟ್ಟಿದ್ದರು.

ಆಧ್ಯಾತ್ಮಿಕ ಉನ್ನತಿ ಹಾಗೂ ಸಾಮಾಜಿಕ ಸಮಾನತೆಯನ್ನು ಉಂಟು ಮಾಡುವ ಅನ್ನ ಕಾಯಕದ ಆರ್ಥಿಕ ಮೌಲ್ಯವೂ ಹಿರಿದಾದ್ದು. ಸಮಾಜದಲ್ಲಿನ ಎಲ್ಲ ಜನರೂ ತಮಗೆ ಅಗತ್ಯವಾದ ಆಹಾರ, ಬಟ್ಟೆ, ವಸತಿ ಮತ್ತೆಲ್ಲ ವಸ್ತುಗಳನ್ನು ಹಾಗೂ ಸೇವೆಗಳನ್ನು ಪಡೆಯಲು ಶರೀರ ಶ್ರಮ ಮಾಡಿ, ಉತ್ಪಾದಿಸಿ, ಈ ಎಲ್ಲ ವಸ್ತು ಸೇವೆಗಳು ಸಮೃದ್ಧವಾಗಿ ದೊರೆತು ಬಡತನ ಕೊನೆಗೊಳ್ಳುತ್ತದೆ. ಪರಸ್ಪರ ಶೋಷಣೆ ತಪ್ಪುತ್ತದೆ. ಶುದ್ಧವಾದ ಸಮಾಜವಾದ ಅಥವಾ ಸರ್ವೋದಯ ಕರಗತವಾಗುತ್ತದೆ.

ಇನ್ನೊಂದು ಸಾಮಾಜಿಕ ಪಿಡುಗು ಅಸ್ಪೃಶ್ಯತೆ. ಇದರ ನಿರ್ಮೂಲನಕ್ಕೆ ಬಸವಣ್ಣನವರು ಸಲ್ಲಿಸಿದ ಸೇವೆ ಅಸದೃಶ, ಅಸ್ಪೃಶ್ಯರೆನಿಸಿದ್ದ ಅನೇಕರು ಬಸವಣ್ಣನವರ ಪ್ರಭಾವದಿಂದ ಸಾಮಾಜಿಕ ಮೇಲ್ಮೆ ಸಾಧಿಸಿದ್ದರು. ಅನುಭವ ಮಂಟಪದಲ್ಲಿ ಸಮಾನರಾಗಿ ಕಂಗೊಳಿಸುತ್ತಿದ್ದರು. ಗಾಂಧೀಜಿ ಬಸವಣ್ಣನವರ ಕೆಲಸವನ್ನೇ ವ್ಯಾಪಕವಾಗಿ ಮುಂದುವರೆಸಿದರು. ಅಸ್ಪೃಶ್ಯರೆನಿಸಿದವರನ್ನು ಹರಿಜನರೆಂದು ಕರೆದರು. ಹರಿಜನ ಹೆಣ್ಣು ಮಗಳನ್ನು ದತ್ತು ತೆಗೆದುಕೊಂಡು ಪಿತೃವಾತ್ಸಲ್ಯವನ್ನೆರೆದರು. ಹರಿಜನರನ್ನು ಮಂದಿರಗಳಿಗೆ ಪ್ರವೇಶ ಮಾಡಿಸಿದರು. ಇದಕ್ಕಾಗಿ ಸತ್ಯಾಗ್ರಹಗಳನ್ನು ನಿರ್ದೇಶಿಸಿದರು. ಹರಿಜನ ಕೇರಿಗಳಲ್ಲಿ ಬಿಡಾರ ಮಾಡಿದರು. ಅಸ್ಪೃಶ್ಯರ ಕಷ್ಟಗಳನ್ನರಿತು ಅವರೊಡನೆ ತಾದತ್ಮ್ಯ ಭಾವನೆ ಮೂಡಿಸಿಕೊಳ್ಳಲು 'ತಾವೊಬ್ಬ ಭಂಗಿ' ಎಂದು ಕರೆದುಕೊಂಡರು ಮಹಾತ್ಮರು. 'ಎನಗಿಂತ ಕಿರಿಯರಿಲ್ಲ' ಎಂದು ಬಸವಣ್ಣನವರು ಹೇಳಿದ್ದರಲ್ಲಿ ಯಾವ ನಮ್ರ ಭಾವವಿತ್ತೋ ಅದೇ ದಿವ್ಯ ನಮ್ರತೆ ಗಾಂಧಿಯವರು 'ನಾನೊಬ್ಬ ಭಂಗಿ' ಎಂದು ಹೇಳಿದಾಗ ಇತ್ತು.

ಶ್ರೀ ಬಸವೇಶ್ವರರಿಗೂ ಮಹಾತ್ಮ ಗಾಂಧಿ ಅವರಿಗೂ ಎಂಟು ಶತಮಾನಗಳ ಅಂತರವಿದ್ದರೂ ವಿಚಾರಗಳಲ್ಲಿ ವಿಶೇಷವಾದ ಸಾಮ್ಯವಿರುವುದನ್ನು ಕಾಣುತ್ತೇವೆ. ಇವರುಗಳು ಬೋಧಿಸಿದ ತತ್ವಗಳೂ ಅನಷ್ಠಾನ ಮಾಡಿದ ಸೂತ್ರಗಳೂ ಅಮರ ತತ್ವಗಳು. ಅಂತೆಯೇ ಅವರುಗಳು ಮಾನವ ಇತಿಹಾಸದಲ್ಲಿ ಸದಾ ಮಿಂಚುತ್ತಿರುವ ಮಹಾತ್ಮರು. ●

ಹೀಗೊಂದು ಅನಿಸಿಕೆ

ಶಿವನಂಜಯ್ಯ, ಬಾಳೇಕಾಯಿ

ಲಿಂಗಾಯತ – ವೀರಶೈವಗಳ ಇಂದಿನ ಜಟಾಪಟಿಯ ನಡುವೆ ಸಿರಿಗೆರೆ ಶ್ರೀಗಳ "ಲಿಂಗಾಯತ ಯಾವತ್ತೂ ಲಿಂಗಾಯಿತವೇ; ಸರ್ಕಾರ ಮಾನ್ಯತೆ ನೀಡಲೀ ಬಿಡಲಿ" ಅನ್ನುವ ಅವರ ನಿಲುವನ್ನು ನಾನು ಸಮರ್ಥಿಸುತ್ತೇನೆ.

ಆದರೂ ಈಗಿನ ಈ ತಿಕ್ಕಾಟ ಬಸವ ಪ್ರತಿಪಾದಿತ ಶುದ್ಧ ಲಿಂಗಾಯಿತದ ಕಡೆಗೆ ನಡೆಯಲು ಒಂದು ಸದಾವಕಾಶ ನೀಡಿರುವುದಂತೂ ಸತ್ಯ.

ಬಹುಪಾಲು ಲಿಂಗಾಯಿತರಿಗೆ ಅದರಲ್ಲೂ ಯುವಕರಿಗೆ ತಮ್ಮ ನಿಜ ಧರ್ಮದ ತಿರುಳಿನ ಗಂಧ ಗಾಳಿಯೇ ತಿಳಿದಿಲ್ಲ ; ತಾತ್ವಿಕ ತಳಹದಿಯಂತೂ ತಿಳಿದೇ ಇಲ್ಲ ಅನ್ನಲು ಅಂಜಿಕೆ ಇಲ್ಲ, ಲಿಂಗಾಯತವನ್ನು ಬದುಕುವುದು ಒತ್ತಟ್ಟಿಗಿರಲಿ; ಅರಿತೂ ಇಲ್ಲ. ಅಲ್ಲಿರುವುದೆಲ್ಲ ಈಗಲೂ ವೈದೀಕ ಆಚರಣೆಗಳೆ. ಹೀಗಾಗಿಯೇ ಈ ಕಚ್ಚಾಟ. ಸಮಾಜದಲ್ಲಿ ಅಕ್ಷರ ಕಲಿತವರೂ ಈ ಗುಂಪಿನಲ್ಲಿ ಸೇರಿರುವುದು ಮರುಕ ಪಡಬೇಕಾದ ಸಂಗತಿ.

ಈಗಲಾದರೂ ನಾಡಿನ ಉದ್ದಗಲಕ್ಕಿರುವ ಮಠಗಳು, ಕ್ರಿಶ್ಚಿಯನ್ ಧರ್ಮದ ಚರ್ಚುಗಳಂತೆ ಕೆಲಸ ಮಾಡಿ ಹಾದಿ ತಪ್ಪಿರುವ ತನ್ನ ಸಮಾಜಕ್ಕೆ ಅದರಲ್ಲಿಯೂ ಯುವ ಸಮಾಜಕ್ಕೆ ಲಿಂಗಾಯತದ ನಿಜ ದರ್ಶನ ಮಾಡಿಸಬೇಕು. ಈಗಿರುವ ಅಕ್ಷರ, ಅನ್ನ ದಾಸೋಹಗಳ ಜತೆಗೆ ಬಸವ ಧರ್ಮದ ದಾಸೋಹ ಉಣಬಡಿಸಲಿ ; ಇಡೀ ವಿಶ್ವಕ್ಕೆ ಬಸವ ಪ್ರತಿಪಾದಿತ ಅವೈದಿಕ ಲಿಂಗಾಯಿತದ ದಿಡ್ಡಿ ಬಾಗಿಲು ತೆಗೆದು ಮಾನವೀಯತೆಯ ತೋಳುಚಾಚಿ, ಹಿಂದೂ ವೈದಿಕ ಸಮಾಜ ಇಲ್ಲಿವರೆಗೂ ಹೊರಗಿಟ್ಟಿರುವ, ಒಳಬರಲು ಇಚ್ಚಿಸುವ, ನೊಂದ ಸಮಾಜವನ್ನು ಇವ ನಮ್ಮವ ಇವ ನಮ್ಮವ ಎಂದು ಬಾಚಿ ಎದೆಗಪ್ಪಿಕೊಳ್ಳಬೇಕು.

ಎಲ್ಲ ಮಠಗಳೂ ಹಣದ ರಾಶಿಮಾಡುವ ಪ್ರವೃತ್ತಿ ಕೈಬಿಟ್ಟು, ರಾಜಕೀಯ ದೂರವಿಟ್ಟು, ಆಧ್ಯಾತ್ಮದ, ಮಾನವೀಯತೆಯ, ಶುದ್ಧ ಕಾಯಕದ ರಾಶಿ ಮಾಡುವಂತಾಗಲಿ. ●

ವಿಶಿಷ್ಟ ಕವಿ ಮೊಹಮ್ಮದ್ ನೈಕಾವಾಡಿ

– ಸಂಕೇತ್ ಜೈನ್

ಅನುವಾದ : ಚಂಪ ಜೈಪ್ರಕಾಶ್

'ಅಲ್ಲಿರುವ ಮಹಡಿ ಮನೆಯನ್ನು ಬಿಟ್ಟು, ದಾರಿದ್ರ್ಯ ನನ್ನ ಮನೆಗೇ ಏಕೆ ಬರುತ್ತದೆ? ಈ ನನ್ನ ಆತ್ಮೀಯ ಗೆಳೆಯ 'ದಾರಿದ್ರ್ಯ, ನನ್ನ ಮುಂದಿನ ಕವನದ ಕೇಂದ್ರ ವಸ್ತು.' ಎನ್ನುತ್ತಾರೆ ಮೊಹಮ್ಮದ್ ನೈಕಾವಾಡಿ. ಮಹಾರಾಷ್ಟ್ರದ ಕೊಲ್ಹಾಪುರ ತಾಲೂಕಿನ ರೆಂಡಲ್ ಎನ್ನುವ ಚಿಕ್ಕ ಹಳ್ಳಿಯಲ್ಲಿ ನೇಯ್ಗೆ ಕೆಲಸ ಮಾಡಿ ನಿವೃತ್ತಿ ಹೊಂದಿದ ಗ್ರಾಮೀಣ ಕವಿ, ಮೊಹಮ್ಮದ್ ನೈಕಾವಾಡಿ.

ಮೂರು ಸಾವಿರಕ್ಕೂ ಹೆಚ್ಚು ಕವಿತೆಗಳನ್ನು ರಚಿಸಿ ಆರು ಪುಸ್ತಕಗಳಾಗಿ ಅವುಗಳನ್ನು ಬಿಡುಗಡೆ ಮಾಡಿದ್ದಾರೆ ಮೊಹಮ್ಮದ್. ಅವರ ಕವಿತೆಗಳಲ್ಲಿರುವ ವಸ್ತುಗಳು ಮನಕಲಕುವಂಥವು. ಹಳ್ಳಿಯ ಜನಜೀವನ, ದಾರಿದ್ರ್ಯ, ಕೂಲಿಕಾರನ ಜೀವನ ಗತಿ, ಮಾನವೀಯತೆ, ಕಲೆ, ಪರಿಸರ, ಪರಿಸರ ಮಾಲಿನ್ಯ, ದೇಶಭಕ್ತಿ ಮುಂತಾದ ವಿಷಯಗಳು ಅವರ ಕವಿತೆಗಳಲ್ಲಿ ಪ್ರವಹಿಸುತ್ತವೆ. "ನಾನೊಬ್ಬ ಬಡವ, ನನ್ನಲ್ಲಿ ಹಣವಿಲ್ಲ. ಹಾಗಾಗಿ ವೃತ್ತ ಪತ್ರಿಕೆಯೊಂದಿಗೆ ಬರುವ ಜಾಹಿರಾತು ಕರಪತ್ರದ ಖಾಲಿ ಇರುವ ಹಿಂಬದಿಯನ್ನು ಕವಿತೆ ಬರೆಯಲು ಬಳಸುತ್ತಿದ್ದೆ. ಈಗಷ್ಟೇ ನನಗೆ ಕವನಗಳನ್ನು ಬರೆಯಲು ಪುಸ್ತಕಕೊಳ್ಳಲು ಸಾಧ್ಯವಾಗಿದೆ. ಇದರಲ್ಲಿ ಕ್ರಮವಾಗಿ ಪದ್ಯಗಳನ್ನು ಬರೆಯುತ್ತಿದ್ದೇನೆ," ಎನ್ನುತ್ತಾರೆ ಮೊಹಮ್ಮದ್. ಈ ಮಾತುಗಳಿಂದ ಅವರು ಬಂದ ದಯನೀಯ ಆರ್ಥಿಕ ಸ್ಥಿತಿಯ ಅರಿವಾಗುತ್ತದೆ.

ನೈಕಾವಾಡಿ, ಆರನೇ ತರಗತಿಯಲ್ಲಿದ್ದಾಗಲೇ ಪರಿಸ್ಥಿತಿಯ ಒತ್ತಡದಿಂದ ಶಾಲೆ ಬಿಡಬೇಕಾಗಿ ಬಂತು. "ನನ್ನ ತಂದೆ, ಕಟ್ಟಡ ಕೂಲಿ ಕೆಲಸಕ್ಕೆ ಹಾಗು ಅಮ್ಮ ಹೊಲಗದ್ದೆಯ ಕೂಲಿ ಕೆಲಸಕ್ಕೆ ಹೋಗುತಿದ್ದಳು, ನನ್ನ ಅಣ್ಣ ಓಸ್ಮಾನ್, ಒಳ್ಳೆಯ ಹಾಡುಗಾರ. ಅವನ ಹಾಡುತ್ತಿದ್ದ ಹಿಂದಿ ಹಾಡುಗಳನ್ನು ಶಾಲೆಯಲ್ಲಿ ಸಹಪಾಟಿಗಳು ಖುಶಿಯಿಂದ ಮತ್ತೆ ಮತ್ತೆ ಕೇಳುತ್ತಿದ್ದರು. ಅವನ ಬಳಿ ಇದ್ದ ಹಿಂದಿ ಹಾಡಿನ ಪುಸ್ತಕಗಳನ್ನು ನಾನು ಓದುತ್ತಿದ್ದೆ. ನನ್ನ ಅಣ್ಣ ಅವನ ಹನ್ನೆರಡನೇ ವಯಸ್ಸಿಗೆ ತೀರಿಕೊಂಡ. ನಾನು ಕವಿತೆ ಬರೆಯುವುದಕ್ಕೆ ಅವನೇ ಸ್ಫೂರ್ತಿ" ಎಂದು ತಮ್ಮ ಬಾಲ್ಯದ ದಿನಗಳನ್ನು ಅವರು ನೆನೆಯುತ್ತಾರೆ. ಶಾಲೆ ಬಿಟ್ಟ ನಂತರ ಹಲವು ವರ್ಷಗಳ ಕಾಲ ನೈಕಾವಾಡಿ ತನ್ನೂರಿನ ಇತರರ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದರು. ನಂತರ ಅವರ ಹಳ್ಳಿಯಲ್ಲೇ ಪವರ ಲೂಂ ಕೆಲಸಗಾರನಾಗಿ ಮುವತ್ತಕ್ಕೂ ಹೆಚ್ಚು ವರ್ಷಗಳ ಕಾಲ ದುಡಿದು ನಿವೃತ್ತಿ ಹೊಂದಿದರು. ಎಂಭತ್ತರ ದಶಕದ ಸುಮಾರಿಗೆ ದಿನಕ್ಕೆ ಹನ್ನೆರಡು ಗಂಟೆಗಳ ಕಾಲ ಮಗ್ಗದ ಮುಂದೆ ನಿಂತು ಕೆಲಸ ಮಾಡಿದರೂ ಅವರಿಗೆ ಸಿಗುತ್ತಿದ್ದ ವೇತನ ರೂ.೧೫೦/-. ಕಳೆದ ವರ್ಷ ಅವರು ನಿವೃತ್ತರಾದಾಗ ಅವರ ವೇತನ ರೂ ೫೦೦೦/- ಮಾತ್ರವೇ ಆಗಿತ್ತು.

"ನನ್ನ ಎಲ್ಲ ಕವಿತೆಗಳೂ ಮಗ್ಗಗಳ ನಿರಂತರ ಸದ್ದಿನ ನಡುವೆ ಹುಟ್ಟು ಪಡೆದವು, ಈಗ ನಿವೃತ್ತನಾದ ಮೇಲೆ ಮಗ್ಗಗಳ ಶಬ್ದವಿಲ್ಲದ ಸ್ಥಿತಿಯಲ್ಲಿ ನಾನು ಏನನ್ನೂ ಬರೆಯಲಾರೆ ಎನ್ನುತ್ತಾರೆ

ಅವರು. ನೈಕಾವಾಡಿ ಯವರ ಕವಿ ಪಯಣ ಆರಂಭವಾದದ್ದು ಹೀಗೆ :–

. ದೈನಿಕ್ ಸತ್ಯವಾದಿ ಎಂಬ ಕೊಲ್ಹಾಪುರದ ಪ್ರಾದೇಶಿಕ ವೃತ್ತ ಪತ್ರಿಕೆಯ ಭಾನುವಾರದ ಸಂಚಿಕೆಗಾಗಿ ಅವರು ತಮ್ಮ ಇಪ್ಪತ್ತನೆ ವಯಸ್ಸಿನಲ್ಲಿ ಮೊದಲ ಬಾರಿಗೆ ತಾಯಿಯ ಬಗ್ಗೆ ಬರೆದ ಕವಿತೆಯನ್ನು ಕಳಿಸಿದರು. ಅದನ್ನು ಆ ಪತ್ರಿಕೆಯವರು, ಮಕ್ಕಳ ಅಂಕಣದಲ್ಲಿ ಪ್ರಕಟಿಸಿದರು. ಇದು ಅವರಿಗೆ ಮುಂದೆ ಮತ್ತಷ್ಟು ಬರೆಯಬೇಕೆಂಬ ಪ್ರೇರಣೆಯನ್ನೂ, ಸ್ಫೂರ್ತಿಯನ್ನೂ ನೀಡಿತ್ತು. ಯಾರೊಂದಿಗೂ ವಿಚಾರ ವಿನಿಮಯವಿಲ್ಲದೆ, ಯಾರ ಮಾರ್ಗದರ್ಶನವೂ ಇಲ್ಲದೆ ತಮಗೆ ಅನಿಸಿದ್ದನ್ನು ಅವರು ಬರೆಯ ತೊಡಗಿದರು. ಪ್ರಸಿದ್ಧ ಮರಾಠಿ ಕವಿ ಶ್ರೀ.ಏಕನಾಥ್ ಪಾಂಡುರಂಗ ರೆಂಡಾಲ್ಕರ್ ಅವರ ರಚನೆಗಳು ಇವರಿಗೆ ಬಹಳ ಮೆಚ್ಚಿಗೆಯಾಗುತ್ತಿತ್ತು. ಅವರು ತಮ್ಮದೇ ಊರಿನವರಾದ್ದರಿಂದ ಅವರ ಬಗ್ಗೆ ಮತ್ತೂ ವಿಶೇಷ ಪ್ರೀತಿ ಇತ್ತು. ೧೯೮೦ ರಲ್ಲಿ ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯವು, ಗ್ರಾಮೀಣ ಜನರಿಂದ ರಚಿತವಾದ ಕವಿತೆಗಳನ್ನು ಪ್ರಕಟಣೆಗೆ ಆಹ್ವಾನಿಸಿತು. ನೈಕಾವಾಡಿಯವರ ಗೆಳೆಯರೊಬ್ಬರು, ಇವರ ಕವಿತೆಗಳನ್ನು ವಿಶ್ವವಿದ್ಯಾಲಯಕ್ಕೆ ಕಳಿಸಲು ಸೂಚಿಸಿದರು. ಈ ಯಾವ ವಿಷಯವೂ ಗೊತ್ತಿರದಿದ್ದ ನೈಕಾವಾಡಿ ಹಿಂಜರಿಯುತ್ತಲೇ ತಮ್ಮ ಕವನಗಳನ್ನು ವಿಶ್ವವಿದ್ಯಾಲಯಕ್ಕೆ ಕಳಿಸಿದರು. ಅವರ 'ನಳಾತ್ಲ ಪಾನಿ' (ನಲ್ಲಿಯ ನೀರು) ಎಂಬ ಕವಿತೆ ವಿಶ್ವವಿದ್ಯಾಲಯದ ವಿಶೇಷ ಮಾನ್ಯತೆಗೆ ಪಾತ್ರವಾಯಿತು. ಆ ಪದ್ಯವು ೧೯೮೦– ೧೯೮೧ ರಲ್ಲಿ ಸಾಹಿತ್ಯ ದರ್ಶನ ಎಂಬ ಸಾಹಿತ್ಯ ವಿದ್ಯಾರ್ಥಿಗಳ ಪಠ್ಯಪುಸ್ತಕದಲ್ಲಿ ಸೇರಿ ಪ್ರಕಟಗೊಂಡಿತು. ಎಂಭತ್ತರ ದಶಕದಲ್ಲಿ ಅವರ ಹಳ್ಳಿಗೆ ನಲ್ಲಿ ಸಂಪರ್ಕ ಬಂದಿತು. ಸರ್ಕಾದವರು ಊರಿನಲ್ಲಿ ಅಲ್ಲಲ್ಲಿ ನಲ್ಲಿ ಸ್ಥಾಪಿಸಿದರು. ನಡು ರಾತ್ರಿಯಲ್ಲಿ ಕೊಳವೆಯಲ್ಲಿ ನೀರು ಬಿಟ್ಟು ವ್ಯವಸ್ಥೆಯನ್ನು ಪರೀಕ್ಷಿಸುತ್ತಿದ್ದರು. ಆಗ ರಾತ್ರಿ ಹೊತ್ತು ನಲ್ಲಿ ಕೆಲಸಗಾರರು ನೀರು ಬಿಡುವುದು, ನೀರು ಬಂದೊಡನೆ ಹಳ್ಳಿಗರು ದಡಬಡಿಸಿ ಎದ್ದು ತಮ್ಮ ಊರಿನಲ್ಲಿ ನಲ್ಲಿಯ ಮೂಲಕ ಬರುತ್ತಿರುವ ನೀರನ್ನು ನೋಡಿ ಸೋಜಿಗ, ಕುತೂಹಲ, ಸಂಭ್ರಮಿಸುತ್ತಾ ನೀರು ಹಿಡಿಯುವುದನ್ನು 'ನಳಾತ್ಲ ಪಾನಿ'ಯಲ್ಲಿ ಬಹಳ ರಂಜನೀಯವಾಗಿ ನಿರೂಪಿಸಿದ್ದರು. ನಂತರದ ದಿನಗಳಲ್ಲಿ ಮರಾಠಿಯ ಸಕಾಳ್, ಮಹಾ ಸತ್ತಾ, ರೋಹಿಣಿ ಪತ್ರಿಕೆಗಳಲ್ಲಿ ನೈಕಾವಾಡಿ ಅವರ ಕವಿತೆಗಳು ಪ್ರಕಟಗೊಂಡವು. ೧೯೮೦ ರಲ್ಲಿ ದೈನಿಕ್ ಪುಡಾರಿ ಎಂಬ ಮರಾಠಿ ಪತ್ರಿಕೆಯವರು 'ಪೌಸ್' ಎಂಬ ಕವಿತೆಯನ್ನು ಪ್ರಕಟಿಸಿ ಅವರಿಗೆ ರೂ.೫/–ನ್ನು ಸಂಭಾವನೆಯಾಗಿ ನೀಡಿತು ! ಆಮ್ರಾಯಿ (ಮಾವಿನ ತೋಪು), ಜಾಚ್ (ಕ್ರೌರ್ಯ) ಹಾಗು ಗಾವ್ರನ್ (ಮನೆಯಲ್ಲೇ ಬೆಳೆಸಿದ್ದು) ಎಂಬ ಅವರ ಮೊದಲ ಮೂರೂ ಪುಸ್ತಕಗಳು ೨೦೦೫ ರಲ್ಲಿ ಒಟ್ಟಿಗೆ ಅಚ್ಚಾಗಿ ಪ್ರಕಟವಾದವು. ಅದೇ ವರ್ಷ ದೊಡ್ಡ ಪ್ರಮಾಣದ ಪ್ರವಾಹ ಇಡೀ ಮಹಾರಾಷ್ಟ್ರವನ್ನೇ ಅಲ್ಲೋಲ ಕಲ್ಲೋಲ ಮಾಡಿತ್ತು. ಆ ಸಂದರ್ಭದಲ್ಲಿ ನೈಕಾವಾಡಿ ಅವರು ಬರೆದ 'ಮಹಾರಾಷ್ಟ್ರಾಚ್ಯ ಮಹಾಪೂರಾಚಿ ಕಹಾನಿ' (ಮಹಾರಾಷ್ಟ್ರದ ಮಹಾ ಪ್ರವಾಹದ ಕಥೆ) ಕವನವು ಪ್ರವಾಹದಿಂದಾಗಿ ಜನರು ಅನುಭವಿಸಿದ ಬವಣೆಯನ್ನು ಮನಮುಟ್ಟುವಂತೆ ವರ್ಣಿಸಿ ಜನರ ಮನಗೆದ್ದಿತು. ಕೊಲ್ಹಾಪುರದ ಆಕಾಶವಾಣಿಯವರು, ನೈಕಾವಾಡಿ ಹಾಗು ಅವರ ಮಿತ್ರ ಅಪ್ಪಾ ಸಾಹೇಬ್ ಲಕ್ಷ್ಮಣ ಕೋಲಿ ಅವರನ್ನು ಅವರ ನಿಲಯದ ಕಾರ್ಯಕ್ರಮಕ್ಕೆ ಬರಮಾಡಿಕೊಂಡರು. ಕೋಲಿಯವರು ನೈಕಾವಾಡಿ ಅವರ ಕವನಗಳನ್ನು ವಾಚನ ಮಾಡಿದ್ದರು. ಮಹಾರಾಷ್ಟ್ರಾದ್ಯಂತ ಹಲವಾರು ಸಮಾರಂಭಗಳಲ್ಲಿ ಈ ಪದ್ಯವನ್ನು ಓದಲಾಯಿತು. ಕಾಡಿನಲ್ಲಿ ಬೆಳೆವ ಗಿಡ, ಮರ, ಹೂವು, ಬಳ್ಳಿ, ಹಣ್ಣು ಕಾಯಿಗಳ ಬಣ್ಣ, ವಾಸನೆ ಎಲ್ಲವೂ ನೈಜವಾಗಿರುತ್ತದೆ, ಅವು ನಗರದ ಗಿಡಮರಗಳಿಗಿಂತ ಭಿನ್ನವಾಗಿರುತ್ತವೆ ಎಂಬ ಅವರ ಕವನವೊಂದು ಕಾನನದ ಕುಸುಮದಂತೆಯೇ ನೈಜತೆಯನ್ನು ಹೊಂದಿ ಓದುಗರ

ಮನಸ್ಸಿನಲ್ಲೆಲ್ಲಾ ಪಸರಿಸಿತು. ಲಾವಣಿ.ಅಭಂಗ್ ಶೈಲಿಯಲ್ಲಿ ಅವರು ಬರೆದ ಹಲವಾರು ಕವಿತೆಗಳು ಪ್ರಕೃತಿಯನ್ನು, ಪ್ರೀತಿಯನ್ನು, ಸಾಮಾಜಿಕ ಸವಾಲುಗಳನ್ನು ಪ್ರತಿಬಿಂಬಿಸುತ್ತವೆ. 'ಜಾಚ್' (ಕ್ರೌರ್ಯ) ಎಂಬ ಸಂಕಲನದಲ್ಲಿ ಪ್ರಸ್ತುತ ಸಾಮಾಜಿಕ ಪರಿಸ್ಥಿತಿ ಅದರ ಸಂಕಷ್ಟಗಳನ್ನು ಬಹಳ ಮನೋಜ್ಞವಾಗಿ ಹಾಗು ಉತ್ತಮ ಕಾವ್ಯ ಶೈಲಿಯಲ್ಲಿ ಅವರು ಅಭಿವ್ಯಕ್ತಿಸಿದ್ದಾರೆ. ಮಕ್ಕಳಿಗೆ ತಿಳಿಹೇಳುತ್ತಾ, ಬದಲಾಗುತ್ತಿರುವ ಪ್ರಪಂಚ, ಪರಿಸರ, ಸಮಾಜ, ಅದರ ಅನನ್ಯತೆ, ಮಕ್ಕಳ ವಿವಿಧ ಭಾವನೆಗಳ ಬಗ್ಗೆ, ಪ್ರಾಸಬದ್ಧವಾಗಿ ಶಿಶುಗೀತೆಗಳಾಗಿ, 'ಆಮ್ರಾಯಿ' (ಮಾವಿನ ತೋಪು) ಎನ್ನುವ ಸಂಕಲನವನ್ನು ಮಕ್ಕಳಿಗಾಗಿಯೇ ರಚಿಸಿದ್ದಾರೆ. ೨೦೧೬ ರಲ್ಲಿ ಪ್ರಕಟವಾದ 'ಮಾಜ ಗಾವ್ ಮಾಜ ಗಾನಿ' (ನಮ್ಮ ಗ್ರಾಮ ನಮ್ಮ ಗೀತೆಗಳು) ೫೪ ಕವಿತೆಗಳ ಸಂಕಲನ. ಇದರಲ್ಲಿ, ಸಾಂಸ್ಕೃತಿಕ ಕಲಾವಿಧಾನ, ಸಾಮಾಜಿಕ ವಿಕಾಸ, ಗ್ರಾಮೀಣ ತಾತ್ವಿಕ ಮೌಲ್ಯಗಳನ್ನು ಕಾಪಾಡುವ ವಿಧಾನ, ಮುಂತಾದ ವಿಷಯಗಳನ್ನು ಹೊನಲಾಗಿ ಹರಿಸಿದ್ದಾರೆ. ರೆಂಡಲ್ ಗ್ರಾಮ, ಹಲವಾರು ವಿಷಯಗಳಿಗೆ ಹೆಸರುವಾಸಿಯಾದ ನೆಲ. ಕುಸ್ತಿಪಟುಗಳು, ಕಲಾಕಾರರು, ತಮಾಷ ಕಲಾಕಾರರು, ನಟರು, ಶಾಸ್ತ್ರೀಯ ಸಂಗೀತಗಾರರು, ಶಾಯರಿಕಾರರು ಮುಂತಾದ ಹಲವಾರು ಕಲಾವಿದರಿಗೆ ಇದು ಜನ್ಮ ಭೂಮಿ. ನೈಕಾವಾಡಿಯವರು, ತನ್ನ ಊರಿನ, ಊರಿನವರ ಬಗ್ಗೆ ಆಳವಾಗಿ ಅಧ್ಯಯನ ಮಾಡಿ, ವಿಸ್ತಾರವಾಗಿ ಗದ್ಯರೂಪದಲ್ಲಿ ಪುಸ್ತಕ ಬರೆಯುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರತಿದಿನ, ಇಂಥ ಕಲಾಕಾರರ ಕುಟುಂಬದವರೊಂದಿಗೆ ಬೆಳಿಗ್ಗೆ ಮತ್ತು ಸಂಜೆ ಎರಡು ಹೊತ್ತೂ ಎರಡೆರಡು ತಾಸು ಕೂತು ಚರ್ಚಿಸುತ್ತಿದ್ದಾರೆ. ಮುಂದಿನ ಆರು ತಿಂಗಳಿನಲ್ಲಿ ಆ ಪುಸ್ತಕವನ್ನು ಹೊರತರುವ ಆಶಯವಿದೆ. ಕೊಲ್ಹಾಪುರದ ಪ್ರಖ್ಯಾತ ಸಾಹಿತ್ಯ ವಿಮರ್ಶಕ, ಶ್ರೀಯುತ ಶ್ಯಾಮ್ ಕುರಾಲೆಯವರು, ನೈಕಾವಾಡಿ ಅವರ ಕವನಗಳನ್ನು ವಿಮರ್ಶೆಮಾಡಿ, ಪ್ರಕಟಿಸಿದ್ದಾರೆ.

ಹಳ್ಳಿಗಳಲ್ಲಿರುವ ಕವಿ ಮತ್ತು ಲೇಖಕರ ಪರಿಸ್ಥಿತಿಯನ್ನು ಕುರಿತು ನೈಕಾವಾಡಿ ಹೀಗೆ ಹೇಳುತ್ತಾರೆ. "ನಮ್ಮ ಭಯಂಕರ ದುಃಸ್ವಪ್ನವೆಂದರೆ, ನಮ್ಮ ಮನೆಯ ಕೋಣೆಯಲ್ಲಿ ಬೆಳಕು ಕಾಣದೆ ಬಿದ್ದಿರುವ ಮಾರಾಟವಾಗದ ಪುಸ್ತಕಗಳು! ನೈಕಾವಾಡಿಯವರಿಗೆ ಹೆಮ್ಮೆಯ ವಿಷಯವೆಂದರೆ, ಅವರ ಎಲ್ಲ ಪುಸ್ತಕಗಳನ್ನೂ ತನ್ನೂರಲ್ಲದೆ, ಮಹಾರಾಷ್ಟ್ರದ ಎಲ್ಲ ಗ್ರಂಥಾಲಯಗಳಲ್ಲೂ ಇಟ್ಟಿದ್ದಾರೆ. ಅವರ ಗೆಳೆಯರೊಬ್ಬರ ಮಗಳು ಅಮೇರಿಕದಲ್ಲಿದ್ದು, ಅಲ್ಲಿನ ಮರಾಠಿ ಗ್ರಂಥಾಲಯಕ್ಕೆ ಅವರ ಪುಸ್ತಕಗಳನ್ನು ನೀಡಿದ್ದಾಳೆ. ಗ್ರಂಥಾಲಯದ ಹೆಸರು ತಿಳಿದಿಲ್ಲವಾದರೂ ಅಷ್ಟು ದೂರದೂರಿನಲ್ಲಿ ತನ್ನ ಪುಸ್ತಕಗಳಿರುವುದು ಅವರಿಗೆ ಸಂತಸ ತಂದಿದೆ. ನೈಕಾವಾಡಿಯವರಿಗೆ ನಾನಾ ಸಂಸ್ಥೆಗಳಿಂದ ಹಲವಾರು ಪ್ರಶಸ್ತಿಗಳನ್ನು ನೀಡಿದ್ದಾರೆ. ಅವುಗಳಲ್ಲಿ ಮುಖ್ಯವಾದುವು, 'ಶಾರದಾ ದೇವಿ ಕಾವ್ಯ ಲೇಖನ್ ಪುರಸ್ಕಾರ್', 'ವಿಶೇಷ್ ಗ್ರಂಥ್ ಪುರಸ್ಕಾರ್' ಅಲ್ಲದೆ ಅವರ ಅರವತ್ತೈದು ಕವನಗಳ ಸಂಗ್ರಹ 'ವೇದ್' (ವೇದನೆ) ಗೆ 'ಕರವೀರ್‌ಸಾಹಿತ್ಯ ಪರಿಶದ್ ಪ್ರಶಸ್ತಿ' ಬಂದಿದೆ. ನೈಕಾವಾಡಿ ಯವರು ಈ ಸಂಕಲನದ ಕೆಲವು ಕವಿತೆಗಳನ್ನು ಅಖಿಲ ಭಾರತ ಮುಸ್ಲಿಮ್ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ೨೦೧೧ ಹಾಗು ೨೦೧೬ ರಲ್ಲಿ ಪ್ರಸ್ತುತ ಪಡಿಸಿದ್ದರು. ಪ್ರಶಸ್ತಿಗಳ ಬಗ್ಗೆ ನೈಕಾವಾಡಿ ಯವರಿಗೆ ಸಿನಿಕತನವಿದೆ. "ಈ ಪುರಸ್ಕಾರಗಳು ಕವಿಯನ್ನು ಜೀವಂತವಾಗಿಡಬಲ್ಲುದೇ? ಪ್ರಶಸ್ತಿಗಳಿಗಿಂತ ಕವಿಯ ಜೀವನ ಸುಭದ್ರಗೊಳ್ಳುವುದು ಮುಖ್ಯ, ಇವು ನನಗೆ ಜೀವನ ನಡೆಸಲು ಹಣ ಒದಗಿಸುವುದಿಲ್ಲ" ಎಂದರು. ಅವರ ಈ ಮಾತುಗಳು ನಮ್ಮ ದೇಶದ ಇತರ ಕವಿಗಳ ಪರಿಸ್ಥಿತಿಯನ್ನು ವಿವರಿಸುತ್ತದೆ. ●

ಕುಮಾರಪ್ಪ ಚಿಂತನೆ

ಕೆ.ವೆಂಕಟರಾಜು

ಜೋಸೆಫ್ ಕಾರ್ನಿಲಿಯಸ್, ಚೆಲ್ಲದೊರೈ ಕುಮಾರಪ್ಪ (೧೮೯೨-೧೯೬೦)ಎಂಬುದು ಅವರ ಪೂರ್ಣ ಹೆಸರು. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ಅಧ್ಯಯನ ಮಾಡಿ ಬಂದವರು. ಅವರು ಕೊಲಂಬಿಯಾದಲ್ಲಿ ಇದ್ದಾಗಲೇ, (ಸ್ವಾತಂತ್ರಪೂರ್ವದಲ್ಲಿ) ಭಾರತದ ಸಾರ್ವಜನಿಕ ಹಣಕಾಸಿನ ಬಗ್ಗೆ ಗಂಭೀರ ಅಧ್ಯಯನ ನಡೆಸಿ, ಹೇಗೆ ಬ್ರಿಟಿಷರು ತಮ್ಮ ತೆರಿಗೆ ನೀತಿಯಿಂದಾಗಿ ಭಾರತವನ್ನು ಶೋಷಿಸುತ್ತಿದ್ದಾರೆ, ಎಂಬುದನ್ನು ತಿಳಿಸಿದರು. ಗಾಂಧಿಯವರಿಂದ ಪ್ರಭಾವಿತರಾದ ಅವರು ಗಾಂಧಿಯವರ ಅರ್ಥ ಚಿಂತನೆಗೆ ಒಂದು ತಾತ್ವಿಕ ರೂಪ ಕೊಟ್ಟವರು. ಎಲ್ಲಕ್ಕೂ ಮಿಗಿಲಾಗಿ ತಮ್ಮ ಚಿಂತನೆಯಂತೆ ಬದುಕಿದವರು, ಗಾಂಧಿಯವರಂತೆ, ಇವರಿಗೂ ಹೇಳಲು ಹೊಸದೇನೂ ಇರಲಿಲ್ಲ. ಅವರು ನಿಸರ್ಗದಲ್ಲಿ ಬೇರೆ ಬೇರೆ ಜೀವ ಜಂತುಗಳು ಪರಸ್ಪರಾವಲಂಬಿಗಳಾಗಿ ಹೇಗೆ ಬದುಕುತ್ತವೆ ಎಂಬುದನ್ನಷ್ಟೇ ಗಮನಿಸಿದರು. ಅದರಿಂದ ಮಾನವ ಸಮಾಜ ಕಲಿಯಬಹುದಾದ ಪಾಠವನ್ನು ಹೆಕ್ಕಿ ತೆಗೆದರು.

ಪರಂಪರಾಗತವಾದ ಮತ್ತು ತೀರಾ ಔಪಚಾರಿಕವಾದ ಗಾಂಧಿಸಂಸ್ಥೆಗಳು, ಕುಮಾರಪ್ಪನವರ ಕ್ರಾಂತಿಕಾರಕ ಕಾಣ್ಕೆಯನ್ನು ಕಾಣಲೇ ಇಲ್ಲ. ಅವುಗಳು ಕೇವಲ ಖಾದಿ ಕೇಂದ್ರವನ್ನು ನಿರ್ವಹಿಸುವ ಮಟ್ಟಿಗೆ ಮಾತ್ರ ಸೀಮಿತಗೊಂಡವು.

ಸ್ವಾತಂತ್ರೋತ್ತರದ ಭಾರತದ ರಾಜಕಾರಣದ ಮುಖ್ಯವಾಹಿನಿ, ಕುಮಾರಪ್ಪ ಮತ್ತು ಅವರ ಚಿಂತನೆಗಳನ್ನು ಪೂರ್ಣ ನಿರ್ಲಕ್ಷಿಸಿತು. ಅವರು ಇತಿಹಾಸದಲ್ಲಿ ಒಂದು ಟಿಪ್ಪಣಿಯಂತಾದರು.

ಈ ಹಿಂದೆ, ಜನಪದ ಸೇವಾ ಟ್ರಸ್ಟ್ ಕುಮಾರಪ್ಪನವರ Economy of Permanence ಅನ್ನು 'ಶಾಶ್ವತ ಅರ್ಥಶಾಸ್ತ್ರ' ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಈಗ ಅವರ ಮತ್ತೊಂದು ಪ್ರಮುಖ ಕೃತಿ Why the Village Moment (1939) ಪುಸ್ತಕವನ್ನು ಜನಪದ ವಿಚಾರದಲ್ಲಿ ಸಂಗ್ರಹಾನುವಾದ ಮಾಡಿ ಪ್ರಕಟಿಸಲಾಗುತ್ತಿದೆ. ೨೧ನೆಯ ಶತಮಾನದ ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು, ನೀತಿ ನಿರೂಪಕರು, ವಿದ್ಯಾರ್ಥಿಗಳು, ಯೋಜಕರು, ಉದ್ಯಮಿಗಳು, ಮುಂತಾದವರು ಇದನ್ನು ಗಮನಿಸಬಹುದು ಮತ್ತು ಗಂಭೀರವಾಗಿ ಸ್ವೀಕರಿಸಬಹುದು ಎಂಬ ದೂರದ ಆಸೆ ನಮ್ಮದು.

ಈ ಸಂಚಿಕೆಯಿಂದ 'ಕುಮಾರಪ್ಪ ಚಿಂತನೆ' ಎಂಬ ಶೀರ್ಷಿಕೆಯಲ್ಲಿ Why the Village Moment ಅನುವಾದವನ್ನು ಸರಣಿಯಲ್ಲಿ ಪ್ರಕಟಿಸಲಾಗುತ್ತಿದೆ.

ಇದು ನಮ್ಮ ಚಿಂತನೆಗೆ ಹೊಸ ಹೊಳಪನ್ನು ನೀಡಲಿದೆ ಎಂದು ಭಾವಿಸುತ್ತೇವೆ.

ನಮ್ಮ ಮುಂದಿರುವ ಕೆಲಸ–೧

ಭಾರತ ಎಂದರೆ ಗ್ರಾಮೀಣ ಭಾರತವೇ ಎನ್ನುವಂತಾಗಿತ್ತು. ಪಟ್ಟಣಗಳು ಅಥವಾ ನಗರಗಳು ಈ ಗ್ರಾಮೀಣ ಭಾರತಕ್ಕೆ ಕೇವಲ ತಗಲಿಕೊಂಡಿದ್ದವಾಗಿದ್ದುವು, ಎಂಬುದನ್ನು ನಾವು ಮರೆತಿದ್ದೇವೆ. ನಾವು ಗ್ರಾಮ ಪುನರ‍್ರಚನೆಯ ಬಗ್ಗೆ ಮಾತನಾಡುತ್ತೇವೆ. ಪುನರ‍್ರಚನೆ ಎಂದರೆ, ಹಿಂದಿನ ತಳಹದಿಯ ಮೇಲೆಯೇ ಪುನಃ ಬೇರೆ ರೀತಿಯಲ್ಲಿ ಕಟ್ಟುವುದು ಎಂದಾಗುತ್ತದೆ. ಆದರೆ, ಹೀಗೆ ಮಾಡುವಾಗ ಇದರ ಇತಿಹಾಸ ಗಮನಿಸುವುದು ತೀರಾ ಅಗತ್ಯ. ಹಿಂದಿನ ವ್ಯವಸ್ಥೆಯಲ್ಲಿ ಯಾವ ಲೋಪಗಳು, ದೋಷಗಳು ಇದ್ದವು ಮತ್ತು ಯಾವುದನ್ನು ತಪ್ಪಿಸಬೇಕು ಮತ್ತು ಯಾವ ಹೊಸ ನೆಲಗಟ್ಟನ್ನು ನಿರ್ಮಿಸಬೇಕು ಎಂದು ಆಲೋಚಿಸಬೇಕಾಗುತ್ತದೆ.

ನಮ್ಮ ದೇಶದಲ್ಲಿ ಬೇರೆ ದೇಶಗಳಲ್ಲಿರುವ ಚಟುವಟಿಕೆ ಪ್ರಾರಂಭಿಸುವ ಮುನ್ನ, ನಮಗೂ ಅವರಿಗೂ ಅಂದರೆ ನಮ್ಮ ದೇಶಕ್ಕೂ, ಪಾಶ್ಚಾತ್ಯ ದೇಶಕ್ಕೂ ಇರುವ ವ್ಯತ್ಯಾಸಗಳನ್ನು ತಿಳಿಯಬೇಕು. ಗ್ರೀಸ್‌ನಲ್ಲಿ ಪಾಶ್ಚಾತ್ಯ ನಾಗರೀಕತೆಯ ಅಂಕುರಾರ್ಪಣವಾಯಿತು ಎಂದು ಹೇಳಬಹುದು. ಪ್ರಮುಖವಾಗಿ ಪಾಶ್ಚಾತ್ಯ ನಾಗರೀಕತೆ ಪಟ್ಟಣ ಅಥವಾ ನಗರದ ನಾಗರೀಕತೆ. ಈ ನಾಗರೀಕತೆ ರಾಜದರ್ಬಾರಿನಿಂದ ನೇರ ಇಳಿದುಬಂದಿತು. ಉತ್ಪಾದನೆಯ ಕೇಂದ್ರಗಳು ನಗರಗಳೇ ಆಗಿದ್ದುವು.

ಹಳ್ಳಿಗಳು ಪಟ್ಟಣಿಗರ ಅಗತ್ಯಗಳಿಗೆ, ವೈಭವೋಪೇತ ಬದುಕಿಗೆ ಕಚ್ಚಾಸಾಮಾಗ್ರಿ ಒದಗಿಸುವ ಮಟ್ಟಕ್ಕೆ ಉಳಿದು ಬಿಟ್ಟಿತ್ತು. ಈ ಪದ್ಧತಿಯಲ್ಲಿ ವ್ಯಕ್ತಿ ತನ್ನ ಖರೀದಿ ಸಾಮರ್ಥವನ್ನು ನಿಧಾನವಾಗಿ ಕಳೆದುಕೊಳ್ಳುತ್ತಾನೆ. ಇದಕ್ಕೆ ಆತನ ಅಸಹಾಯಕತೆ ಮತ್ತು ಈ ಚಟುವಟಿಕೆಯಲ್ಲಿ ಪಾಲುದಾರಿಕೆ ಇಲ್ಲದಿರುವಿಕೆ ಕಾರಣವಾಗುತ್ತದೆ. ಇದು ಮುಂದೆ ನಿರುದ್ಯೋಗಕ್ಕೆ ಕಾರಣವಾಗುತ್ತದೆ. ನಿಧಾನವಾಗಿ ಇದು ಏಕಾಸ್ವಾಮ್ಯಕ್ಕೆ ಎಡೆಮಾಡಿಕೊಡುತ್ತದೆ. ಅದು ಬೆಲೆಗಳನ್ನು ಹಾಗೂ ಮಾರುಕಟ್ಟೆಯನ್ನು ನಿಯಂತ್ರಿಸುತ್ತದೆ.

ನಮ್ಮ ದೇಶದಲ್ಲಿ ನಮ್ಮ ಪೂರ್ವಿಕರು ಈ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳುವ ಉಪಾಯ ಕಂಡುಕೊಂಡಿದ್ದರು. ಈ ಕೆಲವು ಸಂಸ್ಥೆಗಳನ್ನು ಸಾಕ್ಷಿಯಾಗಿ ಕೊಡಬಹುದು

೧. ಕೂಡು ಕುಟುಂಬಗಳು (Joint Family System)

೨. ಕೃಷಿ ಭೂಮಿಯನ್ನು ಕುಟುಂಬಗಳು ಬೆಳೆದಂತೆ ಒಡೆಯುತ್ತಾ ಹೋಗುವಿಕೆ (fragmentation of land)

೩. ಜಾತಿ ಪದ್ಧತಿ (ಇಂದು ಈ ಪದ್ಧತಿ ಅನೇಕ ಕೆಡುಕನ್ನು ಸೃಷ್ಟಿಸಿದೆ)

ಕೂಡು ಕುಟುಂಬಗಳು : ಇದು ಸ್ಪರ್ಧೆಯನ್ನೂ ಕಡಿಮೆ ಮಾಡುತ್ತದೆ. ಅಲ್ಲದೇ ಸಂಪತ್ತು, ಒಂದೇ ಕಡೆ ಸಂಗ್ರಹವಾಗುವಿಕೆಯನ್ನು ಹಾಗೂ ತೀವ್ರ ಬಡತನವನ್ನು ತಪ್ಪಿಸುತ್ತದೆ. ಕುಟುಂಬದಲ್ಲಿ ಹೆಚ್ಚು ಸಾಮರ್ಥ್ಯವಿರುವವರು, ದುರ್ಬಲರಿಗೆ ನೆರವಾಗುವುದನ್ನು ತಮ್ಮ ಕರ್ತವ್ಯ ಎಂದು ಭಾವಿಸುತ್ತಾರೆ.

ಭೂಮಿಯ ತುಂಡಾಗುವ ಪ್ರಕ್ರಿಯೆಯಿಂದ, ಕೃಷಿಯೇ ಪ್ರಧಾನ ಉದ್ಯೋಗ/ವೃತ್ತಿಯಾಗಿರುವ ಆಗಿನ ಸಮಾಜದಲ್ಲಿ ದಳ್ಳಾಳಿಗಳು ಮತ್ತು ಬಂಡವಾಳಗಾರರಿಗೆ ಫಲವತ್ತಾದ ಕೃಷಿಭೂಮಿ ಪರಭಾರೆಯಾಗುತ್ತಿರಲಿಲ್ಲ ಕೃಷಿ ಮೇಲೆ ಅವಲಂಬಿತ ಪ್ರತಿರೈತನ ಬಳಿ, ಫಲವತ್ತಾದ ಭೂಮಿ, ಮಧ್ಯಮ ಗುಣಮಟ್ಟದ ಭೂಮಿ ಹಾಗೂ ಅಷ್ಟೊಂದು ಉತ್ತಮವಲ್ಲದ ಭೂಮಿ ಇರುತ್ತಿತ್ತು. ಫಲವತ್ತಾದ ಭೂಮಿಯನ್ನು ಪರಭಾರೆ ಮಾಡಬೇಕಿದ್ದರೆ, ಸಮುದಾಯದ ಒಪ್ಪಿತ ಬೇಕಾದ ಕಾಲವೂ ಇತ್ತು.

ಜಾತಿ ಪದ್ಧತಿಯ ದೆಸೆಯಿಂದಾದ ಉದ್ಯೋಗದಲ್ಲಿ ಸ್ಪರ್ಧೆ ಇರುತ್ತಿರಲಿಲ್ಲ. ಈಗ ಈ ಸ್ಪರ್ಧೆಯಿಂದ, ಬೇಗ ಶ್ರೀಮಂತರಾಗಲು ವೃತ್ತಿ/ಉದ್ಯೋಗಕ್ಕೆ ಅನಗತ್ಯನಾಗಿ ಮುನ್ನುಗ್ಗುತ್ತಿರುವವರನ್ನು ಕಾಣಬಹುದಾಗಿದೆ.

ಈ ಎಲ್ಲಾ ಆರ್ಥಿಕ ಚಟುವಟಿಕೆಗಳೂ ಗ್ರಾಮಗಳಲ್ಲಿಯೇ ನಡೆಯುತ್ತಿದ್ದು, ಪಟ್ಟಣಗಳಲ್ಲಿ ಸೀಮಿತ ಚಟುವಟಿಕೆ ನಡೆಯುತ್ತಿದ್ದುವು. ಗ್ರಾಮೀಣ ನಾಗರಿಕತೆಯಲ್ಲಿ ಶೋಷಣೆ ಮತ್ತು ಸಂಪತ್ತಿನ ಕೇಂದ್ರೀಕರಣ ಇರಲು ಸಾಧ್ಯವಿರಲಿಲ್ಲ. ಇದು ಎಲ್ಲರಿಗೂ ಉದ್ಯೋಗಾವಕಾಶ ಕಲ್ಪಿಸುತ್ತಲ್ಲದೇ, ತೀವ್ರ ಬಡತನವನ್ನು ನಿಯಂತ್ರಿಸಿತ್ತು. ದುರಾಸೆ ಹಿಡಿತದಲ್ಲಿತ್ತು. ಇವುಗಳನ್ನು ಪಾಶ್ಚಾತ್ಯ ವಿದ್ವಾಂಸರು ಗಮನಿಸಿಯೇ ಇಲ್ಲ.

ಈ ಕೆಲವು ಶತಮಾನಗಳಲ್ಲಿ, ಗ್ರಾಮೀಣ ಭಾರತ, ಪಾಶ್ಚಾತ್ಯ ಉತ್ಪಾದನೆಯ ಕ್ರಮಗಳಿಗೆ ಬಲಿಯಾಯಿತು. ಪ್ರತಿ ಕೈಗಾರಿಕೆಗೂ ಒಬ್ಬ ಉದ್ಯಮಿ, ಒಬ್ಬ ತಜ್ಞ ಅಥವಾ ನಿಪುಣ ಮತ್ತು ಕೆಲಸಗಾರ ಅಗತ್ಯವಿದೆ. ಇವರು ತಯಾರಿಸುವ ಪದಾರ್ಥಗಳ ಮಾರಾಟದಿಂದ ಬಂದ ಹಣದಿಂದಲೇ ಇವರು ಸೇವೆ ಒದಗಿಸಬೇಕು. ಉದ್ಯಮಿ ಮತ್ತು ನಿಪುಣ/ತಜ್ಞ ಹಳ್ಳಿ ತೊರೆದು ಹೊರಟುಹೋದ. ಕೆಲಸಗಾರ ಮಾತ್ರ ತನ್ನ ಭವಿಷ್ಯವನ್ನು ಏಕಾಂಗಿಯಾಗಿ ಕಟ್ಟಿಕೊಳ್ಳಬೇಕಾಯಿತು. ಉತ್ಪಾದನೆಯ ಬದಲಾಗಿ, ಪಟ್ಟಣದ ಕೈಗಾರಿಕೆಗಳಿಗೆ ಕಚ್ಚಾ ಸರಕು ಒದಗಿಸುವ ಮಟ್ಟಕ್ಕೆ ಇಳಿಯಿತು.

ಗ್ರಾಮೀಣ ಉತ್ಪಾದಕರಾಗಿದ್ದ, ಉದ್ಯಮಿ ಮತ್ತು ತಜ್ಞ, ಹಳ್ಳಿ ತೊರೆದು ಹೋದ ಕಾರಣ, ಅನೇಕ ವೃತ್ತಿಗಳು ಕಾಣದಾದವು. ಇದರಿಂದ ಕೃಷಿಭೂಮಿಯ ಮೇಲಿನ ಒತ್ತಡ ಹೆಚ್ಚುವಂತೆ ಆಯಿತು. ಒಂದು ಶತಮಾನದ ಹಿಂದೆ ಕೈಗಾರಿಕಾ ಚಟುವಟಿಕೆಗಳಿಂದ ತುಂಬಿದ ಗ್ರಾಮಗಳು, ಶುದ್ಧಾಂಗವಾಗಿ ಕೇವಲ ಕೃಷಿ ಮೇಲೆ ಅವಲಂಬಿತವಾದ ದೇಶವಾಯಿತು. ನಮ್ಮ ಜನರ ಆರ್ಥಿಕ ಸ್ಥಿತಿ ಉತ್ತಮ ಪಡಿಸಬೇಕಾದರೆ, ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೈವಿಧ್ಯಮಯವಾದ ವೃತ್ತಿಗಳನ್ನು ಹೆಚ್ಚಿಸಬೇಕು. ಗ್ರಾಮದಲ್ಲಿ ಲಭ್ಯವಿರುವ ಎಲ್ಲ ಪ್ರತಿಭೆಗಳನ್ನು ಇದರಲ್ಲಿ ತೊಡಗಿಸಬೇಕು.ನಾವು ಗಡಿಯಾರವನ್ನು ಹಿಂದಕ್ಕೆ ತಿರುಗಿಸುತ್ತಿಲ್ಲ. ಅಪ್ಪ ಹಾಕಿದ ಆಲದ ಮರಕ್ಕೆ ನೇಣುಹಾಕಿ ಕೊಳ್ಳಬೇಕೆಂಬ ಪ್ರವೃತ್ತಿ ಯತ್ತ ಹೆಜ್ಜೆಹಾಕುತ್ತಿಲ್ಲ. ಹಳ್ಳಿ ಮತ್ತು ಪಟ್ಟಣಗಳ ಆರ್ಥಿಕ ಸಂಬಂಧಗಳನ್ನು ಮರುರೂಪಿಸುತ್ತಿದ್ದೇವೆ.

ನಾವು ಶೋಷಣೆ ಮುಕ್ತವಾದ ಅಥವಾ ಯಾರೂ ಶೋಷಿಸಲು ಆಗದಂತಹ ಆರ್ಥಿಕ ಸಂಸ್ಥೆಗಳನ್ನು ಮರುರೂಪಿಸಬೇಕಾಗಿದೆ. ವ್ಯವಸ್ಥೆಯಲ್ಲಿ ಯಥಾಸ್ಥಿತಿ ಉಳಿಸಿಕೊಂಡು, ಕೇವಲ ಆದರ್ಶಗಳನ್ನಷ್ಟೇ ನೆಚ್ಚಿಕೊಂಡರೆ ನಾವು ಅಪಾಯಕ್ಕೆ ಸಿಕ್ಕಿಕೊಳ್ಳುತ್ತೇವೆ. ಭಾರತೀಯ ಬುದ್ಧಿಮತ್ತೆ, ನಿರ್ಲಿಪ್ತವಾದ ಮತ್ತು ಸ್ವಯಂಸ್ಫೂರ್ತಿ ಸಂಘಟನೆಯನ್ನು ಕಟ್ಟಲು ಸಮರ್ಥವಾಗಿದೆ.ಅಖಿಲ

ಭಾರತ ಗ್ರಾಮೀಣ ಕೈಗಾರಿಕೆಗಳ ಸಂಘದ ಪ್ರತಿನಿಧಿಗಳು ತಾವು ಕೆಲಸ ಮಾಡುವ ಕ್ಷೇತ್ರಗಳನ್ನು ಆಯ್ದುಕೊಳ್ಳುತ್ತಾರೆ. ಕೇಂದ್ರ ಸಂಸ್ಥೆ ಇವರಿಗೆ ಇಂತಹದನ್ನು ಮಾಡಿ ಎಂದು ನಿರ್ದೇಶಿಸುವುದಿಲ್ಲ. ಯಾರೂ ಲಾಭಗಳಿಸಬಹುದಾದ ಕೆಲವು ಉದ್ಯಮಗಳತ್ತ ದಿಕ್ಕುತೋರಿಸುತ್ತದೆ. ನಾವು ಈ ದಿಕ್ಕಿನಲ್ಲಿ ಮುಂದುವರೆದಂತೆಲ್ಲ ಬದುಕಿಗೆ ಅಗತ್ಯವಾದ ಎಲ್ಲವನ್ನು ತಲುಪುವ ವಿಶ್ವಾಸವಿದೆ. ನಾವು ನಮ್ಮದೇ ಉದ್ಯಮ ಸ್ಥಾಪಿಸಲು ಹೊರಡುವುದಿಲ್ಲ. ಚಮ್ಮಾರ, ಕುಂಬಾರ, ಬಡಗಿ ನಮ್ಮ ಉದ್ಯಮಿಗಳಾಗುತ್ತಾರೆ.ಈ ಉದ್ಯಮಿಗಳು ಉತ್ತಮವಾದದನ್ನು ತಯಾರಿಸಲು ಮತ್ತು ಬೇಡಿಕೆಯನ್ನು ಪೂರೈಸುವಷ್ಟನ್ನು ತಯಾರಿಸಲು ನೆರವಾಗುತ್ತೇವೆ.

ಮುಂದುವರೆಯುವುದು.........

(೧೯೩೪.ಅಖಿಲ ಭಾರತ ಗ್ರಾಮೀಣ ಕೈಗಾರಿಕಾ ಸಂಘಟನೆಯ ಕಾರ್ಯದರ್ಶಿ ಮತ್ತು ಸಂಚಾಲಕ ಸ್ಥಾನದಿಂದ ಈ ಸಂಸ್ಥೆಯ ಉದ್ದೇಶಗಳ ಬಗ್ಗೆ ಮಂಡಿಸಿದ ವಿಷಯ.)

ಅನ್ವೇಷಿಯ ಟಿಪ್ಪಣಿ

ಅಪೂರ್ವ ಅನುಭವ ನೀಡಿದ ವರ್ಷಾಂತ್ಯ

ಕೃಪಾ ಕಿಶೋರ್ ರಾಮಚಂದ್ರನ್

ಕಳೆದ ಒಂದು ದಶಕದಲ್ಲಿ ಪ್ರಪಂಚದಾದ್ಯಂತ ಫ್ಯಾಶನ್ ಆಗಿರುವ ಹತ್ತು ವಿಚಾರಗಳಲ್ಲಿ "ಸುಸ್ಥಿರ ಜೀವನ" ಎಂಬುದು ಪಟ್ಟಿಯ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ ಎಂದರೆ ತಪ್ಪಾಗಲಾರದು. ಇತ್ತೀಚಿನ ದಿನಗಳಲ್ಲಿ ಫೇಸ್‌ಬುಕ್‌ನಂತಹ ಸಮಾಜ ಜಾಲತಾಣಗಳಲ್ಲೋ ಅಥವಾ ಸಣ್ಣ ಪಾರ್ಟಿಗಳಲ್ಲೋ ತಮ್ಮ ಪರಿಸರ ಸ್ನೇಹಿ ಬದುಕಿನ ಬಗ್ಗೆ ಚರ್ಚೆ ಮಾಡಿಯೇ ಮಾಡುತ್ತಾರೆ. ಕಂಪನಿಗಳು ಸುಸ್ಥಿರತೆಯ ಹೆಸರಿನಲ್ಲಿ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವುದಲ್ಲದೆ ಜನರನ್ನು ಹುಸಿ ಪರಿಸರ ಸ್ನೇಹಿ ಜೀವನದ ಕಡೆಗೆ ತಳ್ಳುತ್ತಿವೆ. ಇದರಿಂದ ಬೇಸತ್ತಿದ್ದ ನನಗೆ ಹೇಗಾದರೂ ಇದರಿಂದ ಬಿಡಿಸಿಕೊಂಡು ಹೆಚ್ಚು ಜವಾಬ್ದಾರಿಯುತವಾದ ಹಾಗು ನೈತಿಕವಾದ ಬದುಕಿನೆಡೆಗೆ ಹೆಜ್ಜೆಹಾಕಬೇಕೆಂದು ನಿರ್ಧರಿಸಿ, ಅಭಿವೃದ್ಧಿ ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ಪ್ರಪಂಚದಲ್ಲಿಯೇ ಅತ್ಯುತ್ತಮವಾದ ಆಕ್ಸಫರ್ಡ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡೆ. ಇದರಿಂದ ನನ್ನ ಎಲ್ಲಾ ಗೊಂದಲಗಳು ಬಗೆಹರಿಯುತ್ತವೆ ಎಂದು ನಂಬಿದ್ದ ನಾನು, ಇನ್ನೂ ಹೆಚ್ಚಿನ ಗೊಂದಲ ಹಾಗು ಪ್ರಶ್ನೆಗಳೊಂದಿಗೆ ಅಲ್ಲಿಂದ ಹಿಂದಿರುಗಿದೆ. ಆದರೆ ಆ ಸಂದರ್ಭದಲ್ಲಿ ಅಲ್ಲೇ ವ್ಯಾಸಂಗ ಮಾಡುತ್ತಿದ್ದ ಕರ್ನಾಟಕದ ಸುಮನಸ ಅವರ ಪರಿಚಯ ಹಾಗೂ ಒಡನಾಟ ಸದಾ ನೆನಪಿನಲ್ಲಿ ಉಳಿಯುವಂತಹದ್ದು.

ಇಬ್ಬರೂ ದಕ್ಷಿಣ ಭಾರತದವರೆಂದು ಪ್ರಾರಂಭವಾದ ನಮ್ಮಿಬ್ಬರ ಸ್ನೇಹ, ನಿಧಾನವಾಗಿ ಅಭಿವೃದ್ಧಿ ಹಾಗು ಪ್ರಪಂಚದ ಸಮಸ್ಯೆಗಳನ್ನು ಚರ್ಚಿಸುತ್ತ, ಒಬ್ಬರನ್ನೊಬ್ಬರು ಗೌರವಿಸುತ್ತ ನಮ್ಮ ನಡುವಿನ ಬಾಂಧವ್ಯವನ್ನು ಹೆಚ್ಚಿಸಿತು. ಈ ಸಂದರ್ಭದಲ್ಲಿ ನಾನು ಜನಪದ ಸೇವಾ ಟ್ರಸ್ಟಿನ ಬಗ್ಗೆ

ಅವರಿಂದ ತಿಳಿದುಕೊಂಡೆ. ಇದರಿಂದ ಸುಮನಸ ಅವರ ಮೇಲಿನ ಗೌರವ ಇನ್ನಷ್ಟು ಹೆಚ್ಚಿತು. ಅವರ ಜೊತೆಗಿನ ಚರ್ಚೆಗಳಲ್ಲಿ ನನ್ನ ಮನಸ್ಸಿಗೆ ತಟ್ಟಿದ ಮಾತೆಂದರೆ ಅವರು ಪ್ರತೀ ಸಲವು "ನಮ್ಮ ನೇಕಾರರು" ಎಂದು ಹೇಳುತ್ತಿದ್ದುದು. ಅವರ ಜೊತೆಗಿನ ಒಡನಾಟವು, ಒಮ್ಮೆ ಜನಪದ ಸೇವಾ ಟ್ರಸ್ಟಿಗೆ ಭೇಟಿ ನೀಡಿ ಅಲ್ಲಿಯ ಕೆಲಸಗಳನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಹಂಬಲವನ್ನು ಹೆಚ್ಚಿಸಿತು. ಸುಮನಸ ಅವರ ಮೇಲುಕೋಟೆಯ ವರ್ಣನೆ ಆರ್. ಕೆ. ನಾರಾಯಣರ ಕಥೆಯಲ್ಲಿ ಬರುವ ಮಾಲ್ಗುಡಿಯಂತೆ ಭಾಸವಾಗುತ್ತಿತ್ತು. ಕಳೆದ ವರ್ಷದ ಕೊನೆಯ ತಿಂಗಳ ಕೊನೆಯ ವಾರದಲ್ಲಿ ಮೇಲುಕೋಟೆಗೆ ಭೇಟಿ ನೀಡಿದೆ. ಮೇಲುಕೋಟೆ, ಕೌಲಗಿ ಕುಟುಂಬ ಮತ್ತು ಅವರ ಕೆಲಸಗಳೆಲ್ಲವೂ ನನ್ನ ಕಲ್ಪನೆಯಲ್ಲಿದ್ದ ಎಲ್ಲ ವಿವರಗಳಿಗೂ ಸರಿಸಮಾನವಾಗಿತ್ತು.

'ಜನಪದ ನಿಲಯ' ಆಗಿರಬಹುದು ಅಥವಾ ಸಂಸ್ಥೆಯ ದತ್ತು ಕೇಂದ್ರವಾಗಿರಬಹುದು, ಎಲ್ಲವೂ ಅದರ ಹಿಂದಿರುವ ವ್ಯಕ್ತಿಗಳಂತೆಯೇ ಸುಂದರವಾಗಿತ್ತು. ನಂತರ ಯೋಗ ನರಸಿಂಹ ಸ್ವಾಮಿ ಬೆಟ್ಟವನ್ನು ಹತ್ತುತ್ತಾ ತಪ್ಪು ಕಲ್ಪನೆಯ ಅಭಿವೃದ್ಧಿಯಿಂದಾಗಿ ಸುಂದರವಾದ ಮೇಲುಕೋಟೆ ಹೇಗೆ ಕುರೂಪಿಯಾಗುತ್ತಿದೆ ಎಂಬುದನ್ನು ಚರ್ಚಿಸುತ್ತಾ ಬೆಟ್ಟವನ್ನು ಹತ್ತಿ ಇಳಿದೆವು. ನಂತರ ನಾನು ಬಹಳ ದಿನಗಳಿಂದ ಕಾಯುತ್ತಿದ್ದ ಜನಪದ ಸೇವಾ ಟ್ರಸ್ಟಿನ 'ಹೊಸ ಜೀವನ ದಾರಿ' ಕೇಂದ್ರಕ್ಕೆ ಭೇಟಿ ನೀಡಿದೆನು. ಕೇಂದ್ರವನ್ನು ಪ್ರವೇಶಿಸುತ್ತಿದ್ದಂತೆ ನೇರವಾಗಿ ನೇಕಾರರು ಪ್ರತಿನಿತ್ಯದ ಪ್ರಾರ್ಥನೆಗೆ ಸೇರಿದ್ದ ಗುಡಿಸಿಲೆಡೆಗೆ ಧಾವಿಸಿದೆವು. ಪ್ರಾರ್ಥನೆಯಲ್ಲಿ ಒಟ್ಟು ೧೫ ಮಂದಿ ಯುವಕ ಯುವತಿಯರು ಸೇರಿದ್ದರು. ಪ್ರಾರ್ಥನೆಯನ್ನು ಸಂತೋಷ್ ಕೌಲಗಿಯವರು ತಮ್ಮ ಗಟ್ಟಿ ಧ್ವನಿಯಲ್ಲಿ ಪ್ರಾರಂಭಿಸಿದರು. ಪ್ರಾರ್ಥನೆಯ ನಂತರ ಒಂದು ನೈತಿಕ ಕತೆಯನ್ನು ಓದಿದರು. ನಂತರ ಅದರ ಬಗ್ಗೆ ಚರ್ಚಿಸಿದರು, ಇತ್ತೀಚೆಗಷ್ಟೆ ಪ್ರವಾಸ ಹೋಗಿ ಬಂದಿದ್ದ ನೇಕಾರರೆಲ್ಲರೂ ಪ್ರವಾಸದ ಅನುಭವವನ್ನು ಹಂಚಿಕೊಂಡರು. ಪ್ರತಿಯೊಬ್ಬರೂ ತಾವು ಪ್ರವಾಸದಲ್ಲಿ ಕಂಡ ವಿಚಾರಗಳ ಬಗ್ಗೆ ವಿವರಿಸಿದರು. ಇಂತಹ ಒಂದು ಸಭೆಯಲ್ಲಿ ಭಾಗವಹಿಸಿದ್ದಕ್ಕೆ ನನಗೆ ಬಹಳ ಸಂತೋಷವಾಯಿತು. ಇದನ್ನು ನೋಡುತ್ತಿದ್ದಾಗ ಕೆಲವು ವರ್ಷಗಳ ಹಿಂದೆ ತೆಲಂಗಾಣ ರಾಜ್ಯದ ಕರೀಂನಗರ್‌ನ ಒಂದು ಖಾದಿ ಸಂಸ್ಥೆಗೆ ನಾನು ನೀಡಿದ ಭೇಟಿ ನೆನಪಾಯಿತು. ಅಲ್ಲಿ ಅಂದು ಮಂದ ಬೆಳಕಿನಲ್ಲಿ ಒಂದು ಮೂಲೆಯಲ್ಲಿ ವೃದ್ಧನೊಬ್ಬ ತನ್ನ ಇಳಿ ವಯಸ್ಸಿನಲ್ಲಿ ನೇಯ್ಗೆ ಮಾಡುತ್ತಿದ್ದ ದೃಶ್ಯವನ್ನು ಕಂಡು ನನಗೆ ಬಹಳ ಬೇಸರವಾಗಿತ್ತು. ಆದರೆ ಇಲ್ಲಿ ಯುವಕರು ಬಹಳ ಸಂತೋಷದಿಂದ ನೇಯ್ಗೆಯನ್ನು ಪ್ರಕೃತಿಯ ಮಡಿಲಿನಲ್ಲಿ ಮಾಡುತ್ತಿರುವುದು ಅಂದಿನ ಬೇಸರವನ್ನು ದೂರಮಾಡಿತು ಮತ್ತು ನೇಯ್ಗೆಯ ಬಗೆಗಿನ ನನ್ನ ಅಭಿಪ್ರಾಯವನ್ನು ಬದಲಿಸಿತು. ಪ್ರಪಂಚದಾದ್ಯಂತ ಎಲ್ಲಾ ರೀತಿಯ ಸಾಂಪ್ರದಾಯಿಕ ಜೀವನೋಪಾಯಗಳು, ತಮ್ಮ ಜೀವವನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಹೊಸ ಜೀವನ ದಾರಿ ಕೇಂದ್ರವು ಅವುಗಳಿಗೆ ಪುನ: ಜೀವವನ್ನು ತುಂಬಿ ಯುವಕರು ಅವುಗಳ ಮೂಲಕ ಕೇವಲ ಹಣಗಳಿಸದೆ ಅದರ ಜೊತೆಗೆ ಒಂದು ನೈತಿಕತೆಯುಳ್ಳ ಜೀವನವನ್ನು ನಡೆಸುವಂತೆ ಪ್ರೇರೇಪಣೆ ನೀಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದಿತು. ನೈಸರ್ಗಿಕ ಬಣ್ಣಗಳನ್ನು ಬಳಸಿ ದಾರಗಳಿಗೆ ಬಣ್ಣ ಹಾಕುವುದನ್ನು ನೋಡುವ ಅವಕಾಶ ಕೂಡ ಕೇಂದ್ರದಲ್ಲಿ ದೊರಕಿತು.

ನಂತರ ಸಂಸ್ಥೆಯು ಸ್ಥಳೀಯ ವೃಕ್ಷಗಳನ್ನು ಸಂರಕ್ಷಿಸಲು ಹಾಕಿಕೊಂಡಿರುವ ನೆನೆಬನ ಯೋಜನೆಯನ್ನು ನೋಡಿದೆ. ಎಲ್ಲೆಲ್ಲೂ ಕಾಡುಗಳು ನಾಶವಾಗುತ್ತಿರುವ ಸಂದರ್ಭದಲ್ಲಿ ಈ ಯೋಜನೆಯು ಬಹಳ ಅಗತ್ಯವಾದದ್ದು ಎನಿಸಿತು. ತಣ್ಣಗಿನ ಎಳನೀರನ್ನು ಕುಡಿದು ಮತ್ತೆ ನೇಯ್ಗೆ

ಕೇಂದ್ರಕ್ಕೆ ಹೋಗಿ ಅಲ್ಲಿಯ ನೇಕಾರರು ನೇಯುತ್ತಿದ್ದ ವಿವಿಧ ರೀತಿಯ ಬಟ್ಟೆಗಳನ್ನು ನೋಡಿದೆ. ನನ್ನಲ್ಲಿ ಅದು ಬಹಳ ಕುತೂಹಲವನ್ನು ಉಂಟು ಮಾಡಿತು.

ಒಲ್ಲದ ಮನಸ್ಸಿನಿಂದ ಹಿಂದಿರುಗಿ ನನ್ನ ಊರಿಗೆ ತೆರಳುವ ಮುನ್ನ ಶ್ರೀ ಸುರೇಂದ್ರ ಕೌಲಗಿ ಹಾಗು ಶ್ರೀಮತಿ ಗಿರಿಜಾ ಕೌಲಗಿಯವರ ಕಾಯವನ್ನು ಪ್ರಕೃತಿಯಲ್ಲಿ ವಿಲೀನ ಮಾಡಿದ ಸ್ಥಳಕ್ಕೆ ಭೇಟಿ ನೀಡಿದೆ. ಆ ಸ್ಥಳದ ಸರಳತೆ ಹಾಗು ಕಂಪನ, ಅವರ ವ್ಯಕ್ತಿತ್ವದ ಅನುಭವವನ್ನು ನೀಡುವ ಜೊತೆಗೆ ಚಿರಾಯುವಾದ ಅವರ ಕನಸನ್ನು ಬಿಂಬಿಸುತ್ತಿತ್ತು. ಒಟ್ಟಾರೆಯಾಗಿ ಜನಪದ ಸೇವಾ ಟ್ರಸ್ಟಿನ ಅನುಭವಗಳು ನನ್ನ ಜೀವನದ ಅಮೂಲ್ಯ ಕಲಿಕೆಯಾಯಿತು. ಈ ಒಂದು ಅವಕಾಶವನ್ನು ಕೊಟ್ಟ ನನ್ನ ಸ್ನೇಹಿತ ಸುಮನಸ್ ಹಾಗೂ ಅವರ ಕುಟುಂಬಕ್ಕೆ ನಾನು ಆಭಾರಿಯಾಗಿದ್ದೇನೆ •

ಗ್ರಾಮೀಣ ಭಾರತ

ನಮ್ಮ ಗ್ರಾಮೀಣ ಜನ ತುರ್ತಾಗಿ ಹಣ ಬೇಕಾದಾಗ ಮೊದಲಿಗೆ ಹಳ್ಳಿಯಲ್ಲಿ ಬಡ್ಡಿಗೆ ಹಣ ಕೊಡುವವರ ಬಳಿ ಹೋಗುತ್ತಾರೆ. ಅಲ್ಲಿ ಸಿಗದಿದ್ದರೆ ಮನೆಯಲ್ಲಿರುವ ಚಿನ್ನ ಬೆಳ್ಳಿಯನ್ನು ಗಿರವಿ ಅಂಗಡಿಯಲ್ಲಿ ಅಡ ಇಟ್ಟು ಹಣ ಪಡೆಯುತ್ತಾರೆ. ಕಳೆದ ಕೆಲವು ವರ್ಷಗಳಿಂದ ಸ್ವಸಹಾಯ ಗುಂಪುಗಳು ಹಳ್ಳಿಗರಿಗೆ ಸ್ವಲ್ಪ ನಿರಾಳವಾಗಿ ಹಣ ಸಿಗಲು ಮತ್ತು ತೀರಿಸಲು ಸಾಕಷ್ಟು ನೆರವಾಗಿವೆ. ಆದರೆ ಅದಕ್ಕೆ ಅದರದೇ ಆದ ಇತಿ ಮಿತಿಗಳಿವೆ. ಆಗ ಇನ್ನೂ ಸುಲಭವಾಗಿ ಹಣ ದೊರಕಿಸಿಕೊಡಲು ಮುಂದೆ ಬಂದವು ಮೈಕ್ರೋಫೈನಾನ್ಸ್ ಕಂಪನಿಗಳು. ಬಹಳವಾಗಿ ಸುಲಭವಾಗಿ ಹಣ ಪಡೆಯಲು ಸಾಧ್ಯವಿದ್ದರೂ, ಒಮ್ಮೆ ಅವರಿಂದ ಸಾಲ ಪಡೆದರೆ ನಮ್ಮ ಹಳ್ಳಿಗರು ಪಡುವ ಪರಿಪಾಟಲು ಹೇಳತೀರಲು ಸಾದ್ಯವಿಲ್ಲ. ಪ್ರತಿವಾರ ಗೊತ್ತಾದ ದಿನ, ಗೊತ್ತಾದ ಸಮಯಕ್ಕೆ ಹಣ ಸಂದಾಯ ಮಾಡಲೇ ಬೇಕು. ಮಾಡದಿದ್ದರೆ ಗುಂಪಿನ ಸದಸ್ಯರು ಮತ್ತು ಕಂಪನಿಯವರು ಹೇರುವ ಒತ್ತಡ ಅಸಾಧ್ಯವಾದುದು. ಆರ್ಥಿಕ ಒಳಗೊಳ್ಳುವಿಕೆ ಹೆಸರಿನಲ್ಲಿ ನಡೆದಿರುವ ಈ ಲೇವಾದೇವಿ ವ್ಯವಹಾರ ಬಡ ಹಳ್ಳಿಗರ ಮೇಲೆ ಉಂಟು ಮಾಡಿರುವ ಮಾನಸಿಕ ಒತ್ತಡವನ್ನು ಯಾರಾದರೂ ಮನ:ಶಾಸ್ತ್ರಜ್ಞರು ಮಾಡಬೇಕು. ಅದರಿಂದ ಅವರ ದೈಹಿಕ ಆರೋಗ್ಯದ ಮೇಲೆ ಆಗುತ್ತಿರುವ ದುಷ್ಪರಿಣಾಮವನ್ನೂ ಅಧ್ಯಯನ ಮಾಡಬೇಕು. ದಕ್ಷಿಣ ಕನ್ನಡದ ದೇವಸ್ಥಾನದ ಕಂಪನಿಯೊಂದು ನಡೆಸುವ ಮೈಕ್ರೋಫೈನಾನ್ಸ್ ವ್ಯವಸ್ಥೆ ಹಳ್ಳಿಗರನ್ನು ಎಷ್ಟು ಕಟ್ಟಿಹಾಕಿದೆ ಎಂದರೆ ಒಮ್ಮೆ ಸಾಲ ಪಡೆದರೆ ಆ ದೇವರಿಂದ ಹಳ್ಳಿಗರಿಗೆ ಬಿಡುಗಡೆಯೇ ಇಲ್ಲ.

ಕಳೆದ ವಾರ ನಮ್ಮ ಹಳ್ಳಿಗಳಿಗೆ ಹೊಸದಾಗಿ ಬಂದ ಮೈಕ್ರೋಫೈನಾನ್ಸ್ ಕಂಪನಿಯೊಂದು ತನ್ನ ಪರಿಚಯ ಮಾಡಿಕೊಂಡು, ತನ್ನ ಕಂಪನಿಯು ಬೇರೆ ಕಂಪನಿಗಳಿಗಿಂತ ಹೇಗೆ ವಿಶೇಷವಾಗಿದೆ ಎಂಬುದನ್ನು ಮುದ್ರಿಸಿ ಹಂಚಿದೆ. ಆ ಹಸ್ತ ಪತ್ರಿಕೆಯೇ ಕಂಪನಿಗಳು ಯಾವ ರೀತಿಯಲ್ಲಿ ಬಡವರನ್ನು ಗೋಳು ಹುಯ್ಯುತ್ತಿವೆ ಎಂಬುದಕ್ಕೆ ಸಾಕ್ಷಿಯಾಗಿದೆ. ಕಂಪನಿಯು ಹೊರಡಿಸಿರುವ ಹಸ್ತ ಪ್ರತಿಯ ಬರಹವನ್ನು ಓದಲು ಪುಟ ೨೧ ನೋಡಿ.

ಹರಿಲಾಲ್ ಗಾಂಧಿ ಕಥನ - ೧

ಮೂಲ : ಚಂದೂಲಾಲ್ ದಲಾಲ್

ಅನುವಾದ : ಜಗದೀಶ ಕೊಪ್ಪ

ಹರಿಲಾಲ್ ಗಾಂಧಿ ಮಹಾತ್ಮ ಗಾಂಧಿಯವರ ಹಿರಿಯ ಮಗ. ತಪ್ಪು ಹೆಜ್ಜೆಗಳಿಂದಾಗಿ ಗಾಂಧಿ ಬದುಕಿಗೆ ಸವಾಲಾದವರು. ಒಮ್ಮೆ ಗಾಂಧಿ ತಮ್ಮ ಈ ಮಗನ ಬಗ್ಗೆ 'ಹರಿಲಾಲ್ ತನ್ನ ಬದುಕಿನಲ್ಲಿ ಹಾಕಿದ ಒಂದು ತಪ್ಪು ಹೆಜ್ಜೆಯಿಂದ ಇಡೀ ಬದುಕನ್ನು ಹಾಳು ಮಾಡಿಕೊಂಡು ಬಿಟ್ಟ. ಹರಿಲಾಲನ ವ್ಯಕ್ತಿತ್ವದಲ್ಲಿ ನನ್ನ ಬದುಕಿನ ಎಲ್ಲಾ ತಪ್ಪುಗಳು ದೊಡ್ಡದಾಗಿಯೂ ಮತ್ತು ನನ್ನ ಎಲ್ಲಾ ಅರ್ಹತೆಗಳು ಚಿಕ್ಕದಾಗಿಯೂ ಸಾಕಾರಗೊಂಡಿವೆ' ಎಂದಿದ್ದಾರೆ. ಹರಿಲಾಲ್ ಅವರ ಬದುಕಿನ ಬಗ್ಗೆ ಅನೇಕ ಊಹಾಪೋಹಗಳು ಇವೆ. ಗಾಂಧಿಯನ್ನು ಹಳಿಯುವವರಿಗೆ ಹರಿಲಾಲ್ ವ್ಯಕ್ತಿತ್ವ ದೊಡ್ಡ ಅಸ್ತ್ರವಾಗಿ ಸಿಕ್ಕಿದೆ. ಹರಿಲಾಲ್ ಅವರ ನಿಜ ಜೀವನವನ್ನು ಶ್ರೀ ಜಗದೀಶ ಕೊಪ್ಪ ಜನಪದ ವಿಚಾರಕ್ಕಾಗಿ ಇಲ್ಲಿ ಅನುವಾದಿಸಿದ್ದಾರೆ.

ಇಡೀ ಜಗತ್ತು ಆಶ್ಚರ್ಯ ಪಡುವ ರೀತಿಯಲ್ಲಿ ಅತ್ಯಂತ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯಿಂದ ಬದುಕಿದ ಮಹಾತ್ಮ ಗಾಂಧಿ ಅವರ ಜೀವನ ಭಾರತದಲ್ಲಿ ನಿರಂತರವಾಗಿ ಚರ್ಚೆಗೆ ಒಳಗಾಗುತ್ತಲೇ ಇದೆ. "ನನ್ನ ಬದುಕೇ ಸಂದೇಶ" ಎಂದು ನುಡಿದ ಗಾಂಧೀಜಿಯವರ ಪ್ರತಿ ಕ್ಷಣದ ಜೀವನ ವಿವರಗಳ ವೃತ್ತಾಂತವನ್ನು ಹಿಡಿದುಕೊಂಡು ಕೂದಲು ಸೀಳುವ ಕಾರ್ಯ ಇಂದಿಗೂ ಸಹ ಮುಂದುವರಿದಿದೆ. ತಮ್ಮ ಆತ್ಮ ಕಥೆಯನ್ನು "ನನ್ನ ಸತ್ಯಾನ್ವೇಷಣೆ" ಎಂದು ಕರೆದುಕೊಂಡ ಗಾಂಧೀಜಿ ತಮ್ಮ ಇಡೀ ಬದುಕನ್ನು ಸಾರ್ವಜನಿಕ ಬದುಕಿಗೆಗೆ ಮೀಸಲಿಟ್ಟಿದ್ದರು. ಈ ಕಾರಣದಿಂದಾಗಿ ತಮ್ಮ ಕುಟುಂಬದ ಸದಸ್ಯರ ಹಿತರಕ್ಷಣೆಯಲ್ಲಿ ಅವರು ವಿಫಲರಾದರು. ವೈಯಕ್ತಿಕ ಹಿತಾಸಕ್ತಿಗಿಂತ ನನ್ನ ಕಣ್ಣೆದುರು ಸಮಾಜದಲ್ಲಿ ನೋಯುವವರು ಮತ್ತು ನೊಂದವರ ಹಿತಾಸಕ್ತಿ ಮುಖ್ಯವೆಂದು ನಂಬಿದ ಅವರು ; ಎಂದಿಗೂ ವೈಯಕ್ತಿಕ ನೋವನ್ನು ಒಂದು ಸಮುದಾಯದ ನೋವೆಂಬಂತೆ ಬಿಂಬಿಸಲಿಲ್ಲ. ಇವೆಲ್ಲಕ್ಕಿಂತ ಮುಖ್ಯವಾಗಿ ಸಾರ್ವಜನಿಕ ಬದುಕಿನಲ್ಲಿರುವ ವ್ಯಕ್ತಿಗೆ ತನ್ನ ಕುಟುಂಬದ ಸದಸ್ಯರ ಪ್ರತಿಯೊಂದು ವಿವರವೂ ಸಮಾಜದ ದೃಷ್ಟಿಯಲ್ಲಿ ಪಾರದರ್ಶಕವಾಗಿರಬೇಕೆಂದು ನಂಬಿದ್ದ ದೃಷ್ಟಿಕೋನದಿಂದಾಗಿ ಗಾಂಧೀಜಿಯವರ ಪತ್ನಿ ಕಸ್ತೂರ ಬಾ ಮತ್ತು ತಮ್ಮ ಮಕ್ಕಳ ಜೊತೆಗಿನ ಒಡನಾಟ, ಸಂಘರ್ಷ ಇವೆಲ್ಲವೂ ಗಾಂಧೀಜಿಯವರ ಆತ್ಮಕಥನ, ಅವರು ಬರೆದ ಪತ್ರಗಳು, ಹರಿಜನ ಹಾಗೂ ಯಂಗ್ ಇಂಡಿಯಾ ಪತ್ರಿಕೆಗಳಲ್ಲಿ ನೀಡಿದ ಸ್ಪಷ್ಟೀಕರಣದ ಲೇಖನಗಳ ಮೂಲಕ ಬಹಿರಂಗಗೊಂಡಿವೆ.

ಮಹಾತ್ಮಗಾಂಧಿ ಮತ್ತು ಅವರ ಹಿರಿಯ ಪುತ್ರ ಹರಿಲಾಲ್ ಗಾಂಧಿ ಇವರ ನಡುವೆ ಉಂಟಾದ ಭಿನ್ನಾಭಿಪ್ರಾಯಗಳು ಹಾಗೂ ನಂತರದ ದಿನಗಳಲ್ಲಿ ಸೃಷ್ಟಿಯಾದ ಸೈದ್ಧಾಂತಿಕ ಸಂಘರ್ಷಗಳಿಗೆ ಹಲವು ಆಯಾಮಗಳಿವೆ. ಆದರೆ, ಈ ಕುರಿತು ಸೂಕ್ತ ಅಧ್ಯಯನ ಅಥವಾ ಪರಿಶೀಲನೆ ಹಾಗೂ ವಿವೇಚನೆಯಿಲ್ಲದೆ ಜನಸಾಮಾನ್ಯರಲ್ಲಿ ರೋಚಕತೆಯನ್ನು ಉಂಟು ಮಾಡುವ

ದೃಷ್ಟಿಕೋನದಿಂದ ತಂದೆ-ಮಗನ ಕುರಿತಂತೆ ಹಿಂದಿ ಹಾಗೂ ಗುಜರಾತಿ ಭಾಷೆಯಲ್ಲಿ ಅನೇಕ ಕಾದಂಬರಿಗಳು ಮತ್ತು ನಾಟಕಗಳು ರಚನೆಗೊಂಡವು. ಇವೆಲ್ಲವೂ ಭಾರತೀಯ ಇತರೆ ಭಾಷೆಗೂ ಕೂಡ ಅನುವಾದಗೊಳ್ಳುವುದರ ಮೂಲಕ ಗಾಂಧೀಜಿಯ ಹಿರಿಯ ಪುತ್ರ ಹರಿಲಾಲ್ ಕುರಿತಂತೆ ಜನಸಾಮಾನ್ಯರಲ್ಲಿ ಇನ್ನಿಲ್ಲದ ಕುತೂಹಲವನ್ನು ಉಂಟು ಮಾಡಿದವು. ಇಂತಹ ಅರ್ಧ ಸತ್ಯದ ಕಥೆಗಳಿಗೆ ಇತಿಶ್ರೀ ಹಾಡುವ ನಿಟ್ಟಿನಲ್ಲಿ ಗುಜರಾತಿ ಭಾಷೆಯಲ್ಲಿ ಚಂದೂಲಾಲ್ ದಲಾಲ್ ಅವರು ರಚಿಸಿದ ಹಾಗೂ ಸಂಪೂರ್ಣವಾದ ವಿದ್ವತ್ ಹಾಗೂ ಸಂಶೋಧನೆಯಿಂದ ಕೂಡಿದ ಹರಿಲಾಲ್ ಗಾಂಧಿಯವರ ಜೀವನ ಚರಿತ್ರೆ ಮತ್ತು ಹರಿಲಾಲ್ ಗಾಂಧಿಯವರ ಮೊಮ್ಮಗಳು ಹಾಗೂ ಮಹಾತ್ಮನ ಮರಿಮೊಮ್ಮಗಳಾದ ನೀಲಂ ಪರೀಖ್ ಎಂಬ ಹೆಣ್ಣು ಮಗಳು ರಚಿಸಿದ ತನ್ನ ಅಜ್ಜನ ಕುರಿತಾದ ನೆನಪುಗಳು ಮತ್ತು ಅಪೂರ್ವ ದಾಖಲೆಗಳನ್ನು ಒಳಗೊಂಡ "ಗಾಂಧೀಜಿ ಕಳೆದುಕೊಂಡ ಹರಿಲಾಲ್ ಎಂಬ ರತ್ನ" ಎಂಬ ಹೆಸರಿನ ಕೃತಿ ಇವುಗಳು ನಮಗೆ ಮಹಾತ್ಮ ಮತ್ತು ಅವರ ಪುತ್ರ ಹರಿಲಾಲ್ ಗಾಂಧಿ ಕುರಿತಂತೆ ಅಪೂರ್ವ ಒಳನೋಟಗಳನ್ನು ನೀಡಬಲ್ಲವು.

ಹರಿಲಾಲ್ ಮತ್ತು ಮಹಾತ್ಮ ಗಾಂಧಿಯವರ ನಡುವೆ ಇಪ್ಪತ್ತು ವರ್ಷಗಳಿಗೂ ಕಡಿಮೆ ಅಂತರವಿತ್ತು. ಹರಿಲಾಲ್ ದಕ್ಷಿಣ ಆಫ್ರಿಕಾದಲ್ಲಿ ತನ್ನ ತಂದೆಯಿಂದ ಪ್ರಭಾವಿತರಾಗಿ ಕೇವಲ ಹದಿನೈದು ವರ್ಷಕ್ಕೆ ಸತ್ಯಾಗ್ರಹಿಯಾಗಿ ರೂಪುಗೊಂಡವರು. ಜೊತೆಗೆ ಆರು ಬಾರಿ ಜೈಲಿಗೆ ಹೋಗಿ ಬಂದರು. ತನ್ನ ತಾಯಿ ಹಾಗೂ ಒಡ ಹುಟ್ಟಿದ ಸಹೋದರರ ಕುರಿತಾಗಿ ಅಪಾರ ಕಾಳಜಿ ಹಾಗೂ ಕರುಣೆಯುಳ್ಳವರಾಗಿದ್ದರು. ಆದರೆ, ತಂದೆ ಮಗನ ನಡುವೆ ಭಿನ್ನಾಭಿಪ್ರಾಯ ಹುಟ್ಟಿಕೊಂಡಿದ್ದು ಏಕೆ? ಮತ್ತು ಯಾವ ಕಾರಣಕ್ಕಾಗಿ? ಇಂತಹ ಪ್ರಶ್ನೆಗಳನ್ನಿಟ್ಟುಕೊಂಡು ಹುಡುಕಾಟ ನಡೆಸಿದರೆ, ನಮಗೆ ಎರಡು ಪ್ರಮುಖ ವಿಷಯಗಳು ಎದುರಾಗುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಗಾಂಧೀಜಿಯವರು ಸ್ವಂತ ತಮ್ಮ ಮಕ್ಕಳಿಗಿಂತ ಇತರೆ ಮಕ್ಕಳನ್ನು ಪ್ರೀತಿಸುತ್ತಿದ್ದಾರೆ ಎಂಬ ಅಂಶವು ಹರಿಲಾಲ್ ಗಾಂಧಿಯ ಅಸಮಾಧಾನಕ್ಕೆ ಕಾರಣವಾಗಿತ್ತು. ಎರಡನೆಯದಾಗಿ ಆಧುನಿಕ ಶಿಕ್ಷಣ ಪದ್ಧತಿ ಕುರಿತಂತೆ ಗಾಂಧೀಜಿಗೆ ಇದ್ದ ಅಭಿಪ್ರಾಯಗಳ ಕುರಿತಂತೆ ಅವರ ಪುತ್ರ ಹರಿಲಾಲ್‌ಗೆ ಸಹಮತವಿರಲಿಲ್ಲ. ಈ ಎರಡು ಅಂಶಗಳು ತಂದೆ ಮಗನ ಪಥವನ್ನು ಜೀವನ ಪೂರ್ತಿ ದೂರ ಇಟ್ಟವು. ಹರಿಲಾಲ್ ತನ್ನ ತಂದೆಯ ವಿರುದ್ಧ ಬೀಸಿದ ಬಂಡಾಯದ ಬಾವುಟ ಗಾಂಧೀಜಿಯವರನ್ನು ಜೀವನದುದ್ದಕ್ಕೂ ನಲುಗಿಸಿತು. ಆದರೆ, ಎಂತಹ ಮುಜುಗರದ ಸಂದರ್ಭದಲ್ಲಿಯೂ ತನ್ನ ಕುಟುಂಬದ ಭಿನ್ನಾಭಿಪ್ರಾಯಗಳನ್ನು ಬಚ್ಚಿಡಲು ಗಾಂಧಿ ಪ್ರಯತ್ನಿಸಲಿಲ್ಲ.

ಗಾಂಧೀಜಿಯವರು ೧೯೧೫ ರಲ್ಲಿ ಅಹಮದಾಬಾದ್ ನಗರದಲ್ಲಿ ಸಬರಮತಿ ಆಶ್ರಮವನ್ನು ಆರಂಭಿಸುವ ಮೊದಲು ದಕ್ಷಿಣ ಆಫ್ರಿಕಾದಲ್ಲಿ ಆರಂಭಿಸಿದ್ದ ಆಶ್ರಮದಲ್ಲಿ ಆಶ್ರಮವಾಸಿಗಳಿಗೆ ಕೆಲವು ಷರತ್ತುಗಳನ್ನು ವಿಧಿಸಿದ್ದರು. ಅವುಗಳಲ್ಲಿ ಪ್ರಮುಖವಾಗಿ ಆಶ್ರಮದಲ್ಲಿರುವ ಕಾರ್ಯಕರ್ತರು ದೇಶ ಸೇವೆಗೆ ಸದಾ ಸಿದ್ಧರಿರಬೇಕು, ಸಾಮೂಹಿಕ ಶ್ರಮದಾನ ಹಾಗೂ ತಮ್ಮ ಕೆಲಸಗಳನ್ನು (ಕಸ ಗುಡಿಸುವುದು, ಅಡುಗೆ ಮಾಡುವುದು, ಬಟ್ಟೆ ಸ್ವಚ್ಛಗೊಳಿಸುವುದು, ಶೌಚಾಲಯಗಳನ್ನು ಶುದ್ಧಗೊಳಿಸುವುದು ಇತ್ಯಾದಿ) ತಾವೇ ಮಾಡಿಕೊಳ್ಳಬೇಕು. ಇಂತಹ ವಿಚಾರಗಳ ಕುರಿತಾಗಿ ಹರಿಲಾಲ್ ಗೆ ಭಿನ್ನಾಭಿಪ್ರಾಯವಿತ್ತು. ಜೊತೆಗೆ ಆಧುನಿಕ ಶಿಕ್ಷಣ ಕ್ರಮವು ಮನುಷ್ಯನನ್ನು ಭೋಗಿಯನ್ನಾಗಿಸುತ್ತದೆ. ಸರಳವಾದ ಹಾಗೂ ಇತಮಿತವಾದ ಬದುಕು ಶ್ರೇಷ್ಠ ಎಂಬ ಗಾಂಧೀಜಿಯವರ ಚಿಂತನೆಗೆ ಬದಲಾಗಿ ಹರಿಲಾಲ್ ಗಾಂಧಿ ಪಶ್ಚಿಮ ಜಗತ್ತಿನ ಆಧುನಿಕ ಶಿಕ್ಷಣ ಕುರಿತಂತೆ ಒಲವು ಉಳ್ಳವರಾಗಿದ್ದರು. ಈ ಕಾರಣಕ್ಕಾಗಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ, ಇಂಗ್ಲೆಂಡಿನ

ಶಿಕ್ಷಣಕ್ಕಾಗಿ ಒಬ್ಬ ವಿದ್ಯಾರ್ಥಿಗೆ ಧನ ಸಹಾಯ ದೊರೆತ ಸಂದರ್ಭದಲ್ಲಿ ಗಾಂಧೀಜಿಯವರು ಅದನ್ನು ತಮ್ಮ ಮಕ್ಕಳಿಗೆ ಬಳಸಿಕೊಳ್ಳದೆ, ಇನ್ನೋರ್ವ ವಿದ್ಯಾರ್ಥಿಗೆ (ತಮ್ಮ ಸಂಬಂಧಿಕರ ಪುತ್ರ) ಅವಕಾಶ ಮಾಡಿಕೊಟ್ಟಿದ್ದು ಭಿನ್ನಾಭಿಪ್ರಾಯದ ಸ್ಫೋಟಕ್ಕೆ ಪ್ರಬಲ ಕಾರಣವಾಯಿತು. ೧೯೧೧ ರಲ್ಲಿ ಹರಿಲಾಲ್ ತನ್ನ ತಂದೆ, ಹಾಗೂ ಕುಟುಂಬದ ಸದಸ್ಯರನ್ನು ತೊರೆದು ಭಾರತಕ್ಕೆ ಹಿಂತಿರುಗಿದರು.

ಹರಿಲಾಲ್ ಗಾಂಧಿ ಯವರ ಕೃತಿಯನ್ನು ಗುಜರಾತಿ ಭಾಷೆಯಲ್ಲಿ ರಚಿಸಿರುವ ಹಾಗೂ ವೃತ್ತಿಯಲ್ಲಿ ಲೆಕ್ಕ ಪರಿಶೋಧಕರಾಗಿದ್ದ ಚಂದೂಲಾಲ್ ದಲಾಲ್ ಅವರು ಹರಿಲಾಲ್ ಗಾಂಧಿ ಕುರಿತ ಅಧ್ಯಯನಕ್ಕಾಗಿ ನಡೆಸಿರುವ ವಿಸ್ತೃತ ಅಧ್ಯಯನ ಓದುಗರಲ್ಲಿ ಬೆರಗು ಮೂಡಿಸುತ್ತದೆ. ಗಾಂಧೀಜಿಯವರ ಬದುಕಿನ ಸಮಗ್ರ ದಿನಚರಿ ಹಾಗೂ ಬದುಕಿನ ವಿವರಗಳನ್ನು ಕಲೆ ಹಾಕಿಕೊಳ್ಳುವುದರ ಜೊತೆಗೆ ಮಹಾತ್ಮ ಗಾಂಧೀಜಿಯವರು ತಮ್ಮ ಜೀವಿತಾವಧಿಯಲ್ಲಿ ಬರೆದಿರುವ ಮುವತ್ತು ನಾಲ್ಕು ಸಾವಿರ ಪತ್ರಗಳನ್ನು ಕೂಲಂಕುಶವಾಗಿ ಅಧ್ಯಯನ ನಡೆಸಿದ್ದಾರೆ. ಇದೂ ಸಾಲದೆಂಬಂತೆ ಮಹಾತ್ಮ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಮಹಾದೇವ ದೇಸಾಯಿ ಅವರು ಗುಜರಾತಿ ಭಾಷೆಯಲ್ಲಿ ಬರೆದಿರುವ ಇಪ್ಪತ್ತಮೂರು ಸಂಪುಟಗಳ ದಿನಚರಿಯ ೯.೩೦೦ ಮುದ್ರಿತ ಪುಟಗಳನ್ನು ಜಾಲಾಡಿದ್ದಾರೆ. ಆಶ್ಚರ್ಯಕರ ಸಂಗತಿಯೆಂದರೆ, ಮಹಾದೇವ ದೇಸಾಯಿ ಅವರು ಸಬರಮತಿ ಆಶ್ರಮವನ್ನು ಸೇರಿದ ದಿನದಿಂದ ಹಿಡಿದು, ೧೯೪೨ ರ ಆಗಸ್ಟ್ ೧೫ ರಂದು ಪುಣೆ ನಗರದ ಆಗಖಾನ್ ಅರಮನೆಯಲ್ಲಿ ಗಾಂಧೀಜಿ ಜೊತೆ ಗೃಹಬಂಧನದಲ್ಲಿದ್ದು ಹೃದಯಾಘಾತದಿಂದ ನಿಧನರಾಗುವ ದಿನದವರೆಗೂ ಅಂದರೆ ಸುಮಾರು ಇಪ್ಪತ್ತೈದು ವರ್ಷಗಳ ಕಾಲದ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಯಾಗಿದ್ದುಕೊಂಡು ಅವರ ಜೊತೆಗಿನ ಒಡನಾಟದ ದಿನಚರಿಯನ್ನು ದಾಖಲಿಸಿದ್ದಾರೆ.

ಮಹಾತ್ಮನನ್ನು ಭೇಟಿ ಮಾಡಿದವರ ಹೆಸರು ಮತ್ತು ಅವರ ಜೊತೆಗೆ ಗಾಂಧೀ ನಡೆಸಿದ ಮಾತುಕತೆಯ ವಿವರಗಳಲ್ಲದೆ, ಗಾಂಧೀಜಿಗೆ ಬಂದ ಪತ್ರಗಳ ವಿವರಗಳು ಮತ್ತು ಅದಕ್ಕೆ ಅವರು ಬರೆದ ಉತ್ತರ ಇವೆಲ್ಲವನ್ನೂ ಸವಿವರವಾಗಿ ದಾಖಲಿಸಿದ್ದಾರೆ. ಆದರೆ, ಮಹಾದೇವ ದೇಸಾಯಿರವರು ಗಾಂಧಿ ಮತ್ತು ಅವರ ಪುತ್ರ ಹರಿಲಾಲ್ ನಡುವಿನ ಭೇಟಿಯ ವಿವರ ಹಾಗೂ ನಡೆದ ಪತ್ರ ವ್ಯವಹಾರ ಕುರಿತಂತೆ ಮೌನ ವಹಿಸಿದ್ದಾರೆ. ಇದೇ ರೀತಿ ಗಾಂಧೀಜಿಯವರ ಜೊತೆ ನಿಕಟ ಸಂಪರ್ಕದಲ್ಲಿದ್ದ ಜಮ್ನಲಾಲ್ ಬಜಾಜ್ ಸೇರಿದಂತೆ ಬಹುತೇಕ ಅನುಯಾಯಿಗಳು ಮೌನಕ್ಕೆ ಶರಣಾಗಿರುವುದು ಹಲವು ಸಂಶಯಗಳಿಗೆ ಎಡೆ ಮಾಡಿಕೊಟ್ಟಿತು. ಈ ಕಾರಣದಿಂದಾಗಿ ಇಂತಹ ಸಂಶಯವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ತೆರೆದ ಪುಸ್ತಕದಂತೆ ಬದುಕಿದ ಮಹಾತ್ಮ ಗಾಂಧಿಯವರು ಬರೆದ ಪತ್ರಗಳು ಹಾಗೂ ಅವರಿಗೆ ಬಂದ ಪತ್ರಗಳು ಜೊತೆಗೆ ಹರಿಲಾಲ್ ಅವರ ಸೊಸೆ ಹಾಗೂ ಮೊಮ್ಮಗಳು ಮತ್ತು ಹರಿಲಾಲ್ ಅವರ ಸಹೋದರರ ಪುತ್ರರು ದಾಖಲಿಸಿರುವ ಮಾಹಿತಿಗಳು ನಮಗೆ ಹರಿಲಾಲ್ ಗಾಂಧಿಯವರ ವ್ಯಕ್ತಿತ್ವದ ಎಲ್ಲಾ ಆಯಾಮಗಳ ಮೇಲೆ ಬೆಳಕು ಚೆಲ್ಲಲು ಸಹಾಯಕವಾಗಿವೆ.

ಗಾಂಧೀಜಿಯವರ ಚಿಂತನೆ ಮತ್ತು ಹರಿಲಾಲ್ ಚಿಂತನೆಗಳ ನಡುವೆ ಇದ್ದ ಸೈದ್ಧಾಂತಿಕ ಭಿನ್ನಾಭಿಪ್ರಾಯ ಹರಿಲಾಲ್ ಗಾಂಧಿಯನ್ನು ಕುಟುಂಬದಿಂದ ದೂರ ಮಾಡಿತು. ದಕ್ಷಿಣ ಆಫ್ರಿಕಾದಿಂದ ವಾಪಸ್ ಬಂದ ಹರಿಲಾಲ್ ಹಲವಾರು ವ್ಯವಹಾರಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡರೂ ಸಹ ಅವರ ವಿಕ್ಷಿಪ್ತ ಮನಸ್ಸು ಮತ್ತು ಆತುರದ ಪ್ರವೃತ್ತಿಯಿಂದ

ಯಾವುದರಲ್ಲಿಯೂ ಯಶಸ್ವಿಯಾಗಲಿಲ್ಲ. ಹತಾಶೆಯ ಸ್ಥಿತಿ ತಲುಪಿದ ಅವರು ಮದ್ಯಪಾನದ ದಾಸರಾದದ್ದು ದುರಂತವೇ ಸರಿ. ಭಾರತದ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸುತ್ತಿದ್ದ ನಾಯಕನೊಬ್ಬನ ಹಿರಿಯ ಪುತ್ರ ಎಂಬ ಏಕೈಕ ಕಾರಣದಿಂದ ಹರಿಲಾಲ್ ಹೋದ ಸ್ಥಳಗಳಲ್ಲಿ ಅನುಕಂಪದ ಆತಿಥ್ಯ ಸಿಗುತ್ತಿತ್ತು. ಆದರೆ, ಹಣದ ವಿಷಯದಲ್ಲಿ ತೀರಾ ಕಟ್ಟುನಿಟ್ಟಿನ ವ್ಯಕ್ತಿಯಾಗಿದ್ದ ಗಾಂಧೀಜಿಯವರು ತಮ್ಮ ಪುತ್ರನಿಗೆ ಯಾರೂ ಅತಿಯಾದ ಹಣದ ಸಹಾಯ ನೀಡುವುದು ಮತ್ತು ಸಾಲ ನೀಡಬಾರದೆಂದು ತಾಕೀತು ಮಾಡಿದ್ದರು. ಇಷ್ಟೆಲ್ಲಾ ಭಿನ್ನಾಭಿಪ್ರಾಯಗಳ ನಡುವೆ ತಂದೆ ಮಗನ ನಡುವೆ ನಿರಂತರ ಪತ್ರ ವ್ಯವಹಾರ ನಡೆಯುತ್ತಿತ್ತು. ಜೊತೆಗೆ ತನ್ನ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ ತನ್ನ ನಾದಿನಿಯರಿಗೆ (ಸಹೋದರರ ಪತ್ನಿಯರು) ಹಾಗೂ ತಾಯಿ ಕಸ್ತೂರ ಬಾ ಅವರಿಗೆ ಅತ್ಯಂತ ಕೃತಜ್ಞತೆಯಿಂದ ಹರಿಲಾಲ್ ಪತ್ರ ಬರೆಯುತ್ತಿದ್ದರು.

ವಾಸ್ತವವಾಗಿ ತಮ್ಮ ಪತ್ನಿ ಗುಲಾಬ್ ಬೆಹನ್ ನಿಧನಾನಂತರ ಮಾನಸಿಕ ಸ್ಥಿಮಿತ ಕಳೆದುಕೊಂಡ ಹರಿಲಾಲ್ ಗಾಂಧಿ ದೇಶದುದ್ದಕ್ಕೂ ತಮ್ಮ ವಿಕ್ಷಿಪ್ತ ಮನಸ್ಸನ್ನು ಹೊತ್ತು ಅಲೆದಾಡಿದರು. ಸ್ವತಂತ್ರ ಉದ್ಯೋಗ ಅಥವಾ ವ್ಯವಹಾರ ನಡೆಸಲು ಅವರು ನಡೆಸಿದ ಪ್ರಯತ್ನಗಳೆಲ್ಲ ವಿಫಲವಾದ ನಂತರ ಅವರು ಮದ್ಯ ವ್ಯಸನಿಯಾಗಿದ್ದರು. ಆದರೆ, ಹರಿಲಾಲ್ ಗಾಂಧಿಯವರನ್ನು ಓರ್ವ ಪರಮ ಕುಡುಕ ಎಂದು ಹಲವರು ಬಿಂಬಿಸಿಕೊಂಡು ಬಂದಿದ್ದಾರೆ. ಆದರೆ, ಹರಿಲಾಲ್ ಗಾಂಧಿಯವರ ಪುತ್ರ ಕಾಂತಿಲಾಲ್ ೧೯೪೪ ರಿಂದ ೧೯೪೮ ರ ಅವಧಿಯಲ್ಲಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದಾಗ, ಅನೇಕ ಬಾರಿ ಮೈಸೂರಿಗೆ ಹರಿಲಾಲ್ ಗಾಂಧಿ ಭೇಟಿ ನೀಡಿರುವ ವಿವರ ನಮಗೆ ಹರಿಲಾಲ್ ಅವರ ಮತ್ತೊಂದು ಮುಖವನ್ನು ಪರಿಚಯಿಸುತ್ತದೆ. ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರನ್ನು ಭೇಟಿ ಮಾಡಿ, ಅವರಿಂದ ಮೈಸೂರು ಮಲ್ಲಿಗೆ, ಮೈಸೂರು ಪಾಕ್ ಹಾಗೂ ದರ್ಬಾರ್ ಸುವಾಸನೆಯ ಅಗರ ಬತ್ತಿ (ಅರಮನೆಯಲ್ಲಿ ಅತಿಥಿಗಳು ಉಳಿದು ಕೊಳ್ಳುತ್ತಿದ್ದ ಕೊಠಡಿಗಳಲ್ಲಿ ಉಪಯೋಗಿಸುತ್ತಿದ್ದ ಮೂರು ಅಡಿ ಎತ್ತರದ ಅಗರಬತ್ತಿ) ಇವುಗಳಲ್ಲದೆ ಇನಾಮು ರೂಪದಲ್ಲಿ ನೀಡುತ್ತಿದ್ದ ಐನೂರು ರೂಪಾಯಿ ಇವೆಲ್ಲವನ್ನು ತಂದು ತಮ್ಮ ಸೊಸೆಯ ಕೈಯಲ್ಲಿ ಇರಿಸುತ್ತಿದ್ದ ಘಟನೆಗಳನ್ನು ಡಾ.ಕಾಂತಿಲಾಲ್ ಅವರ ಪತ್ನಿ ಹಾಗೂ ಕೇರಳದ ಹೆಣ್ಣು ಮಗಳಾದ ಸುಶೀಲಾ ತಮ್ಮ ಮಾವನ ಕುರಿತಂತೆ ಹೃದಯ ಸ್ಪರ್ಶಿಯಾಗಿ ದಾಖಲಿಸಿದ್ದಾರೆ.

ಭಾರತದ ಬಡತನ, ಅನಕ್ಷರತೆ, ಜಾತಿ ಜಾತಿಗಳ ತಾರತಮ್ಯ, ಅನಾರೋಗ್ಯ ಇವುಗಳ ಜೊತೆಗೆ ಸ್ವಾತಂತ್ರ್ಯ ಹೋರಾಟ ಹೀಗೆ ಹಲವು ರೂಪದ ಜವಾಬ್ದಾರಿಗಳನ್ನು ಒಟ್ಟಿಗೆ ಹೆಗಲ ಮೇಲೆ ಹೊತ್ತು ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ನಿರಂತರ ದೇಶ ಸುತ್ತುತ್ತಿದ್ದ ಗಾಂಧೀಜಿಯವರು ತನ್ನ ಕುಟುಂಬದ ಸದಸ್ಯರ ಕಾಳಜಿಯನ್ನು ಮರೆತಿರಲಿಲ್ಲ. ಅನೇಕ ಬಾರಿ ಹರಿಲಾಲ್ ಗಾಂಧಿಯ ವರ್ತನೆಯಿಂದ ತೀವ್ರವಾಗಿ ನೊಂದುಕೊಂಡಾಗ "ನನ್ನೊಳಗಿನ ಕಾಮದ ವಿಕೃತಿಗೆ ಆ ದೇವರು ನನಗೆ ಕೊಟ್ಟ ಶಿಕ್ಷೆ" ಎಂದು ಕೊಳ್ಳುತ್ತಾ ಒಳಗೊಳಗೆ ಅತ್ತು ಕಣ್ಣೀರು ಒರೆಸಿಕೊಂಡರು. ಒಮ್ಮೆ ಅಂದಿನ ಬಾಂಬೆಯಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು ನಂತರ ಮತ್ತೆ ಹಿಂದೂ ಧರ್ಮಕ್ಕೆ ಹಿಂತಿರುಗಿದ ಹರಿಲಾಲ್ ಗಾಂಧಿಯ ಚಂಚಲ ಪ್ರವೃತ್ತಿಯ ಕುರಿತಂತೆ ಮುಸ್ಲಿಂ ಬಾಂಧವರಿಗೆ ಗಾಂಧೀಜಿಯವರು ಬರೆದ ಬಹಿರಂಗ ಪತ್ರ ಅವರ ಹೃದಯ ವೈಶಾಲ್ಯತೆಗೆ ಸಾಕ್ಷಿಯಾಗಿದೆ.

೧೯೮೮ ರಲ್ಲಿ ಬಂದ ಗುಜರಾತಿ ಭಾಷೆಯ " ಬೆಳಕಿನಡಿಯ ಕತ್ತಲು" ಮತ್ತು ಪ್ರಖ್ಯಾತ ರಂಗನಿರ್ದೇಶಕ ಪೆರೋಜ್ ಖಾನ್ ರಚಿಸಿ ನಿರ್ದೇಶಿಸಿದ " ಮಹಾತ್ಮನ ವಿರುದ್ಧ ಗಾಂಧಿ" ಎಂಬ

ನಾಟಕ ಮತ್ತು ಕೀತ್ ಹೆಲ್ಲರ್ ಎಂಬ ಮಹಿಳಾ ಲೇಖಕಿ ರಚಿಸಿದ ಇಂಗ್ಲೀಷ್ ಕಾದಂಬರಿ "ಗಾಂಧಿಗೆ ಗೊತ್ತಿದ್ದ ಮಹಿಳೆ" ಇಂತಹ ಕೃತಿಗಳಲ್ಲಿ ಹರಿಲಾಲ್ ಅವರನ್ನು ಶೋಚನೀಯವಾಗಿ, ವ್ಯಗ್ರ ಮನಸ್ಸಿನ ಪುತ್ರನಾಗಿ, ಚಂಚಲ ಸ್ವಭಾವದ ವ್ಯಕ್ತಿಯಾಗಿ ಚಿತ್ರಿಸಲಾಗಿದೆ. ಇಂತಹ ಅರ್ಧ ಸತ್ಯಗಳ ಮೇಲೆ ಬೆಳಕು ಚೆಲ್ಲುವಂತ ಅನೇಕ ಘಟನೆಗಳನ್ನು ಓದುಗರು ಮುಂದಿನ ಅಧ್ಯಾಯಗಳಲ್ಲಿ ಕಾಣಬಹುದಾಗಿದೆ. •

(ಮುಂದುವರಿಯುವುದು)

.... ಪುಟ ೧೬ ರಿಂದ

ಮೈಕ್ರೋಫೈನಾನ್ಸ್ ಕಂಪನಿ ಹೊರಡಿಸಿರುವ ಹಸ್ತ ಪತ್ರಿಕೆ ಅವರದೇ ಭಾಷೆಯಲ್ಲಿ ಈ ಕೆಳಕಾಣಿಸಿದಂತಿದೆ

೧. ಜಾತಿ ಮತ್ತು ಅಂಗವೈಕಲ್ಯತೆ ಆಧಾರದಂತೆ ನಾವು ಭೇದ ಭಾವ ತೋಸುವುದಿಲ್ಲ.

೨. ನಾವು ಪ್ರತಿಯೊಬ್ಬರೊಂದಿಗೂ ಗೌರವದಿಂದ ವರ್ತಿಸುತ್ತೇವೆ.

೩. ಸತತವಾಗಿ ಎರಡು ವಾರಗಳ ಬಳಿಕವೂ ಸದಸ್ಯೆ ಹಣ (ಕಂತು)ಪಾವತಿ ಮಾಡದಿರುವ ಸಂದರ್ಭ ಹೊರತುಪಡಿಸಿ ಬೇರೆ ಯಾವ ಸಂದರ್ಭದಲ್ಲೂ ನಾವು ಸಾಲ ವಿತರಣೆ ಅಥವಾ ವಸೂಲಾತಿಗೆ ಸದಸ್ಯರ ಮನೆ ಅಥವಾ ಕೇಂದ್ರದ ಸ್ಥಳಗಳಿಗೆ ಭೇಟಿ ಕೊಡುವುದಿಲ್ಲ.

೪. ಸರಿಯಲ್ಲದ ಸಮಯದಲ್ಲಿ (ಅಂದರೆ ರಾತ್ರಿ ೮ ಗಂಟೆ ಬಳಿಕ ೭ ಗಂಟೆಗೆ ಮುಂಚೆ) ಮರಣ ಅಥವಾ ವಿವಾಹ ಮೊದಲಾದ ವಿಶೇಷ ಸಂದರ್ಭಗಳಲ್ಲಿ ನಾವು ಸದಸ್ಯೆಯರ ಮನೆ ಅಥವಾ ಕಛೇರಿ ಸ್ಥಳಕ್ಕೆ ಭೇಟಿ ನೀಡುವುದಿಲ್ಲ.

೫. ಸದಸ್ಯೆಯರೊಂದಿಗೆ ಅಥವಾ ಇನ್ನ್ಯಾರೇ ಇತರರೊಂದಿಗೆ ನಾವು ಯಾವುದೇ ಕೆಟ್ಟದಾದ/ಕೀಳಾದ ಭಾಷೆಯಲ್ಲಿ ಮಾತನಾಡುವುದಿಲ್ಲ.

೬. ಸದಸ್ಯೆಯರಿಂದ ಸಾಲವನ್ನು ವಸೂಲಿ ಮಾಡುವುದಕ್ಕಾಗಿ ನಾವು ತೋಳುಬಲ ಮತ್ತು ಕುತಂತ್ರ ಉಪಯೋಗಿಸುವುದಿಲ್ಲ.

೭. ಜೆ.ಎಲ್.ಜಿ ಮಾದರಿಯಂತೆ ಯಾವುದೇ ಕಷ್ಟಕರ ಸಂದರ್ಭದಲ್ಲಿ ಸದಸ್ಯೆಯರು ಒಬ್ಬರಿಗೊಬ್ಬರು ಸಹಾಯ ಮಾಡುವಂತೆ ನಾವು ಅವರಿಗೆ ಪ್ರೋತ್ಸಾಹಿಸುತ್ತೇವೆ.

ಸಾಮಾಜಿಕ ಹೋರಾಟದ ಅಸ್ತ್ರವಾಗಿ ಪಾದಯಾತ್ರೆ

– ಕೆ. ಮನು

ಪಾದಯಾತ್ರೆ ಎಂದೊಡನೆ ನಮ್ಮ ಮನದಲ್ಲಿ ಮೂಡುವುದು ತೀರ್ಥಯಾತ್ರೆಗೆಂದು ಹೊರಟ ಭಕ್ತಾದಿಗಳ ಸಾಲು. ಮಂತ್ರಾಲಯ, ಪಂಢರಾಪುರ. ಮಹದೇಶ್ವರ ಬೆಟ್ಟ, ತಿರುಪತಿ ಅಥವಾ ಶಬರಿ ಮಲೆ ಮುಂತಾದ ದೈವ ಸನ್ನಿಧಿಗಳಿಗೆ ಭಕ್ತರು ಕಾಲ್ನಡಿಗೆಯಲ್ಲೇ ಸಾಗುವುದನ್ನು ಕಂಡಿದ್ದೀರಲ್ಲವೇ ? ಈ ಯಾತ್ರೆಯು ಕೆಲವರಿಗೆ ತಮ್ಮ ಮನೆ ದೇವರ ದರ್ಶನಕ್ಕೆ ಒಮ್ಮೆಯಾದರೂ ಕಾಲ್ನಡಿಗೆಯಲ್ಲಿ ಹೋಗಬೇಕೆಂಬ ಅತೀವವಾದ ಬಯಕೆ. ಇನ್ನು ಕೆಲವರಿಗೆ ಆ ಕಾರ್ಯವನ್ನು ಒಮ್ಮೆಯಾದರೂ ಕೈಗೊಳ್ಳದಿದ್ದರೆ ದೈವ ಕೃಪೆ ಪ್ರಾಪ್ತವಾಗದೇ ಹೋದೀತೆಂಬ ಭೀತಿ. ಇವೆರಡೂ ಅಲ್ಲದಿದ್ದವರಿಗೆ ತಮ್ಮ ದೈನಂದಿನ ಚಟುವಟಿಕೆಯಿಂದ ಉಂಟಾದ ಏಕತಾನೆಯನ್ನು ಮುರಿದು ಒಂದಿಷ್ಟು ಜೀವನೋತ್ಸಾಹವನ್ನು ಮರುದುಂಬಿಸಿಕೊಳ್ಳುವ ವಿಧಾನ. ಈ ಬಗೆಯ ಪಾದಯಾತ್ರೆಗೆ ಕಾರಣ ಏನೇ ಇರಲಿ, ಹಿನ್ನೆಲೆಯಲ್ಲಿ ಅವರವರ ದೈವ ಭಕ್ತಿಯ ಸ್ವರಭಾರದ ಸ್ಪಷ್ಟತೆಯನ್ನು ಕಂಡು ಕೊಳ್ಳಬಹುದು. ಆತನಿದ್ದಾನೋ ಇಲ್ಲವೋ ; ಆ ಸ್ಥಳ ಒಂದಿದೆಯಲ್ಲಾ ! ಎಲ್ಲರೂ ಹೋಗುವಾಗ ನಾನೇನು ಕಮ್ಮಿ ಎಂದು ಕಾಲ್ನಡಿಗೆಯ ಸಾಹಸಕ್ಕೆ ಕೈಹಾಕುವ ಶಾಸ್ತ್ರವಿಧಿ ಇಂದು ಎಲ್ಲಾ ಧರ್ಮಗಳಲ್ಲೂ ಪ್ರಚಲಿತವಾಗಿದೆ.

ಪಾದಯಾತ್ರೆ ಅಥವಾ ಕಾಲ್ನಡಿಗೆ ಎಂಬುದು ಮನುಷ್ಯನ ಪ್ರಾಥಮಿಕ ಪ್ರಯಾಣದ ವಿಧಾನ. ಸ್ವತಃ ಇಷ್ಟ ಪಟ್ಟು ಬೇಕಾದಲ್ಲಿಗೆ ಬೆಳೆಸಲಾದ ಪ್ರಯಾಣವು ಯಾತ್ರೆ ಎಂದೆನಿಸುತ್ತದೆ. ಅವುಗಳ ಅಧಿಕೃತ ದಾಖಲಾತಿಯೂ ಆಗುತ್ತದೆ. ಒಂದು ಪಕ್ಷ ತನಗೆ ಇಷ್ಟವಿಲ್ಲದೆ ಅನಿವಾರ್ಯವಾಗಿ ಮುಂದೆಲ್ಲಿಗೆ ಎಂಬುದೂ ತಿಳಿಯದೆ ಕೈಗೊಂಡ ಪ್ರಯಾಣವನ್ನು ದಾಖಲಿಸುವ ಪ್ರಯತ್ನಗಳೂ ನಡೆಯುವುದಿಲ್ಲ. ಇಂದು ಪ್ರಪಂಚದ ತುಂಬಾ ಈ ಬಗೆಯ ದಾಖಲಿಸದಿದ್ದ ಪ್ರಯಾಣಗಳೇ ತುಂಬಿಹೋಗಿವೆ. ಅಂತಹ ಪ್ರಯಾಣ ಕೈಗೊಂಡವರ ಚರಿತ್ರೆಯ ಪ್ರಶ್ನೆಯೇ ಸೃಷ್ಟಿಯಾಗುವುದಿಲ್ಲ.

ಯಂತ್ರ ಯುಗದಲ್ಲಿ ಪ್ರಯಾಣಕ್ಕೆಂದು ನೂರಾರು ಸಾಧನಗಳನ್ನು ಕಂಡುಕೊಂಡ ಮೇಲೆ ನಡಿಗೆ ಎಂಬ ಕ್ರಿಯೆಯೇ ಅಪರೂಪವಾಗುತ್ತಿದೆ. ನಡೆದು ಗಮನ ಸೆಳೆವ ಅಥವಾ ಗಮನ ಸೆಳೆಯಲೆಂದೇ ಕೈಗೊಂಡ ನಡಿಗೆಯನ್ನ ಮಾತ್ರ ನಾವು ಪಾದಯಾತ್ರೆ ಎಂದು ಸಾಮಾನ್ಯವಾಗಿ ಒಪ್ಪಿಕೊಂಡಿದ್ದೇವೆ. " ಏನಯ್ಯಾ, ಎಲ್ಲಿಗೆ ಪಾದಯಾತ್ರೆ ಬೆಳೆಸಿದ್ದೀಯಾ?' ಎಂದರೆ ನಿನ್ನ ನಡಿಗೆಯ ಹಿಂದೆ ಯಾವ ಹುನ್ನಾರವಿದೆ ಎಂದು ಅರ್ಥೈಸಿಕೊಳ್ಳಬೇಕಾಗಿದೆ.

ಈ ನಡಿಗೆ ಎಂಬ ಕ್ರಿಯೆಯನ್ನು ಪಾದಯಾತ್ರೆಯನ್ನಾಗಿಸಿ ಯಶಸ್ವಿಯಾಗಿ ಬಳಸಿಕೊಂಡವರಲ್ಲಿ ಮಹಾತ್ಮ ಗಾಂಧಿ ಮೊದಲಿಗರು. ಸುಮಾರು ೫೦೦೦ ಗಣಿ ಕಾರ್ಮಿಕರನ್ನು ಕಟ್ಟಿಕೊಂಡು ದಕ್ಷಿಣ ಆಫ್ರಿಕಾದಲ್ಲಿ ನಡೆಸಿದ ಪ್ರಯೋಗ ಯಶಸ್ವಿಯಾದಾಗ ಅವರಿಗೆ ಪಾದಯಾತ್ರೆಯಲ್ಲಿ ಗಾಢವಾದ ನಂಬಿಕೆ ಹುಟ್ಟಿತು. ತಾವು ಭಾರತಕ್ಕೆ ಬಂದಾದ ಮೇಲೆ ಉಪ್ಪಿನ ಮೇಲೆ ವಿಧಿಸಿದ್ದ ಕರವನ್ನು ವಿರೋಧಿಸಲು ಆ ತಂತ್ರವನ್ನು ಬಳಸುತ್ತಾರೆ. ಸಮುದ್ರದ ನೀರನ್ನು ಆವಿಗೊಳಿಸಿ ಯಾರೊಬ್ಬರೂ ತಮ್ಮ ಉಪ್ಪನ್ನು ತಯಾರಿಸಬಹುದಾಗಿದ್ದಾಗ ಕಸುಬನ್ನೇ, ಕಾನೂನು ಬಾಹಿರವೆಂದು ಘೋಷಿಸಲಾಗಿ ಜನರ ಸಾಮಾನ್ಯರ ಜೀವನವೇ ಅಸ್ತವ್ಯಸ್ತಗೊಂಡಿರುತ್ತದೆ. ಅಹಮದಾಬಾದ್ ಬಳಿ ಇರುವ ಸಾಬರಮತಿ ಆಶ್ರಮದಿಂದ ಸಮುದ್ರದ ದಂಡೆಯಲ್ಲಿರುವ ದಂಡಿಯವರೆಗೂ ೩೮೮ ಕಿಮಿ ಗಳ ಪಾದಯಾತ್ರೆಯನ್ನು ಕೈಗೊಳ್ಳುತ್ತಾರೆ. ತನ್ನ ೭೮ ಕಟ್ಟಾ ಸಹಚರರನ್ನು ಜೊತೆಗಿಟ್ಟುಕೊಂಡು ದಿನಕ್ಕೆ ೧೦ ಮೈಲುಗಳಂತೆ ೨೪ ದಿನಗಳ ಕಾಲ ನಡೆಯುತ್ತಾರೆ. ಮಾರ್ಚ ೧೨ ರಿಂದ ಏಪ್ರಿಲ್ ೬ ರವರಗೆ ನಡೆದ ಈ ಪಾದಯಾತ್ರೆ ಸುಮಾರು ೧ ಲಕ್ಷ ಜನರನ್ನು ಬೀದಿಗಿಳಿಸುತ್ತದೆ. ದಿಗ್ಭ್ರಮೆಗೊಂಡ ಬ್ರಿಟೀಷರು ಸುಮಾರು ೬೦,೦೦೦ ಜನರನ್ನು ಬಂಧಿಸಿ ಬಿಡುಗಡೆ ಮಾಡಬೇಕಾಗುತ್ತದೆ. ಜಗತ್ತಿನಲ್ಲಿ ಅತೀ ದೊಡ್ಡ ಅಹಿಂಸಾ ಮಾರ್ಗದ ಕರವಿರೋಧಿ ಚಳುವಳಿ ಎಂದು ಅದು ಇಂದಿಗೂ ಪ್ರಸಿದ್ಧವಾಗಿದೆ. ಸಮುದ್ರ ದಂಡೆಗೆ ತಲುಪಿದ ನಾಲ್ಕು ಸಾವಿರ ಪಾದಯಾತ್ರಿಗಳು ಬೇಕಾದಲೆಲ್ಲ ಉಪ್ಪನ್ನು ತಯಾರಿಸಿ ಹಂಚಿಕೊಂಡು ವಿಜಯೋತ್ಸವವನ್ನು ಆಚರಿಸುತ್ತಾರೆ. ಇಡೀ ಚಳುವಳಿಯ ಯಶಸ್ಸು ಅಂತರಾಷ್ಟ್ರೀಯ ಮಾಧ್ಯಮಗಳಲ್ಲಿ ಬಿತ್ತರಗೊಂಡು ವಸಾಹತುಶಾಹಿ ಅಡಿಯಲ್ಲಿ ನಲುಗಿಹೋಗಿದ್ದ ಇತರ ದೇಶಗಳಲ್ಲೂ ಸ್ವಾತಂತ್ರ ಹೋರಾಟದ ಕಿಡಿ ಹತ್ತಿಕೊಳ್ಳುತ್ತದೆ. ಭಾರತದಲ್ಲಿ ಆಂತರಿಕವಾಗಿ ಒಗ್ಗಟ್ಟಿನ ಭಾವನೆ ಹೆಚ್ಚಾಗಿ ಬ್ರಿಟೀಷರನ್ನು ಕೈಕಟ್ಟಿ ಕೂಡಿಸುವ ಸಾಧನವನ್ನು ಕಂಡುಕೊಂಡ ನೆಮ್ಮದಿಯ ಭಾವವೂ ಉಂಟಾಗುತ್ತದೆ.

ಇದೇ ದಿನಗಳಲ್ಲಿ ಬ್ರಿಟೀಷ್ ಸರ್ಕಾರವು ಭಗತ್ ಸಿಂಗ್ , ರಾಜಗುರು ಹಾಗೂ ಸುಖದೇವ್‌ರಂತಹ ಕ್ರಾಂತಿಕಾರಿಗಳನ್ನು ಗಲ್ಲಿಗೇರಿಸುತ್ತದೆ. ಅದಕ್ಕೂ ಸೇರಿಸಿಯೇ ಈ ಪ್ರತಿರೋಧವೆಂಬಂತೆ ಗಾಂಧೀಜಿ ಈ ಬೃಹತ್ ನಾಗರಿಕ ಅಸಹಕಾರ ಚಳುವಳಿಯನ್ನು ಮುಂದುವರೆಸುತ್ತಾರೆ. ಈ ಅರ್ಥಪೂರ್ಣ ನಡಿಗೆಯನ್ನು ಗಾಂಧೀಜಿಯವರು ಯಾವುದೇ ದಾಖಲೆ ಸ್ಥಾಪನೆಗೆಂದು ಕೈಗೊಂಡದ್ದಲ್ಲ. ಆದರೆ ಅದರ ಹಿಂದಿದ್ದ ಎಲ್ಲಾ ಸದುದ್ದೇಶಗಳನ್ನು ಅವರು ಅರಿತಿದ್ದಂತೆ ತೋರುತ್ತದೆ. ನಡಿಗೆಯ ಅಂತ್ಯದಲ್ಲಿ ಜನರು/ಪಾದಯಾತ್ರಿಗಳು ಸಮರೋಪಾದಿಯಲ್ಲಿ ಸಮುದ್ರದ ನೀರಿನಿಂದ ಉಪ್ಪನ್ನು ತಯಾರಿಸಿ ಮಾರಾಟ ಮಾಡುವ ಮೂಲಕ ಪಾದಯಾತ್ರೆಯ ಮುಕ್ತಾಯ ಹಾಡಬೇಕಿರುತ್ತದೆ. ಆದರೆ ಗಾಂಧೀಜಿ ತಮ್ಮ ಮೂಲ ಉದ್ದೇಶವಾದ ಬ್ರಿಟೀಷ್ ಸರ್ಕಾರದ ವಿರೋಧವನ್ನು ಪುಷ್ಟಿಗೊಳಿಸುತ್ತಲೇ ಸಾಗುತ್ತಾರೆ.

ಈ ಪಾದಯಾತ್ರೆಯ ಸಲುವಾಗಿ ಜನ ಸೇರಿದ ಸಂದರ್ಭದಲ್ಲಿ ಚಳುವಳಿಗೆ ಹೊಸ ತಲೆಮಾರಿನ ಯುವಕರನ್ನು ನೊಂದಾಯಿಸಿಕೊಳ್ಳುತ್ತಾರೆ. ನೂರಾರು ಸರ್ಕಾರಿ ನೌಕರರನ್ನು ಕೆಲಸ ಬಿಟ್ಟು ಚಳುವಳಿ ಸೇರಲು ಪ್ರೇರೇಪಿಸುತ್ತಾರೆ. ಯಶಸ್ವಿ ಕಂಡ ಪಾದಯಾತ್ರೆಯ ದೊಂದಿಯನ್ನು ಆರದಂತೆ ಕಾಪಾಡಿಕೊಳ್ಳಲು ತಮ್ಮ ಕಾಲ್ನಡಿಗೆಯನ್ನು ಚಾಲ್ತಿಯಲ್ಲಿ ಇಟ್ಟಿರುತ್ತಾರೆ. ವಯಸ್ಸು ೬೧ ಆದರೂ ಇನ್ನಷ್ಟು ಕಡಲ ತೀರದ ಹಳ್ಳಿಗಳಲ್ಲಿ ಜನರ ಹುರಿದುಂಬಿಸುವಿಕೆಯಲ್ಲೆ ಮುಂದುವರೆಯುತ್ತಾರೆ. ೧೯೩೩ ರಲ್ಲಿ ಒಂದು ವರ್ಷದಷ್ಟು ದೀರ್ಘಾವಧಿಯ ಕಾಲ್ನಡಿಗೆಯನ್ನು ದೇಶಾದ್ಯಂತ ಅಸ್ಪ್ರಶ್ಯತೆಯನ್ನು ತಡೆಗಟ್ಟಲೆಂದು ಕೈಗೊಳ್ಳುತ್ತಾರೆ. ಪಾದಯಾತ್ರೆಯ ಜನ ಸಂಘಟನಾ

ಶಕ್ತಿಯನ್ನು ಮನಗೊಂಡು ಆಚಾರ್ಯ ವಿನೋಬಾ ಭಾವೆಯವರು ಏಪ್ರಿಲ್ ೧೯೫೧ ರಲ್ಲಿ ಭೂದಾನ ಚಳುವಳಿಯನ್ನು ನಲಗೊಂಡ ಜಿಲ್ಲೆಯ ಪೂಚಂಪಲ್ಲಿಯಿಂದ ಬೋಧ ಗಯಾವರೆಗೂ ಪಾದಯಾತ್ರೆಯ ಮೂಲಕ ಕೊಂಡೊಯ್ಯುತ್ತಾರೆ. ಈ ಪಾದಯಾತ್ರೆಯಲ್ಲಿ ವಿಶೇಷವಾದ ಘಟನೆಯೊಂದು ನಡೆಯುತ್ತದೆ. ನಲಗೊಂಡ ಜಿಲ್ಲೆಯಲ್ಲಿ ತಳವರ್ಗದ ಸಮುದಾಯಗಳ ಸಭೆ ನಡೆಸಿದ ಸಂದರ್ಭದಲ್ಲಿ ಭೂ ರೈತ ಕುಟುಂಬಗಳಿಂದ ತಮ್ಮ ಜೀವನೋಪಾಯಕ್ಕಾಗಿ ಎಂಭತ್ತು ಎಕರೆ ಜಮೀನಿಗೆ ಬೇಡಿಕೆ ಬರುತ್ತದೆ. ನಲವತ್ತು ಎಕರೆ ತರಿ ಭೂಮಿ ಹಾಗೂ ನಲವತ್ತು ಎಕರೆ ಖುಷ್ಕಿ. ಅಷ್ಟು ದೊಡ್ಡ ಪ್ರಮಾಣದ ನೆಲವನ್ನು ಸರ್ಕಾರದಿಂದ ಹೇಗೆ ಮಂಜೂರು ಮಾಡಿಸಿ ಕೊಳ್ಳುವುದು ? ಎಂಬ ಚರ್ಚೆ ತೀವ್ರವಾಗಿ ನಡೆದಿರುವಾಗ ಸಭೆಯಲ್ಲಿದ್ದ ರಾಮಚಂದ್ರ ರೆಡ್ಡಿ ಎಂಬ ಸ್ಥಳೀಯ ಜಮೀನುದಾರ ಎದ್ದು ನಿಂತು 'ನಾನು ಕೊಡುತ್ತೇನೆ' ಎಂದು ಘೋಷಿಸಿ ಸಭೆಯನ್ನು ಬೆರಗುಗೊಳಿಸುತ್ತಾನೆ. ಅಲ್ಲಿಂದಾಚೆಗೆ ಚಳುವಳಿಯ ಸ್ವರೂಪವೇ ಬದಲಾಗಿ ಬಿಡುತ್ತದೆ. ದೇಶಾದ್ಯಂತ ಲಕ್ಷಾಂತರ ಎಕರೆ ಭೂಮಿ ನಿರ್ಗತಿಕ ಭೂ ರೈತರಿಗೆ ದೊರಕುತ್ತದೆ. ಹೀಗೆ ಕೆಲವರು ಪಾದಯಾತ್ರೆಯಿಂದ ಆಗಬಹುದಾದ ಲಾಭವನ್ನು ಅರಿತು ದೂರದೂರದ ಕಾಲ್ನಡಿಗೆಗಳನ್ನು ಕೈಗೊಂಡು ಚಳುವಳಿಗಳನ್ನು ಕಟ್ಟಿದ ನಿದರ್ಶನಗಳನ್ನು ಕಾಣಬಹುದು. ಪ್ರಚಾರಕ್ಕೆ, ಪ್ರತಿರೋಧಕ್ಕೆ, ಸಂಘಟನೆ ಬೆಳಸಲಿಕ್ಕೆ ಇತ್ಯಾದಿ ಇವೆಲ್ಲಾ ಸಂದರ್ಭದಲ್ಲೂ ಸ್ವಸಾಮರ್ಥ್ಯವನ್ನು ಅರಿತು ಜನರ ಆಶಯಗಳನ್ನು ತಿಳಿದು ಕೊಳ್ಳಲು ಪಾದಯಾತ್ರೆಗಳನ್ನು ಕೈಗೊಂಡ ನಿದರ್ಶನಗಳನ್ನು ಕಾಣಬಹುದು. ೧೯೮೩ರಲ್ಲಿ ಪ್ರಧಾನಿ ಚಂದ್ರಶೇಖರ ೨೫೦ ಸಹಚರರೊಂದಿಗೆ ಕನ್ಯಾಕುಮಾರಿಯಿಂದ ದೆಹಲಿಯ ರಾಜಘಾಟ್‌ವರಗೆ ೪೨೬೦ ಕಿಮಿ ಗಳನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದರು. ೫೫ ವರ್ಷದ ಚಂದ್ರಶೇಖರ್ ಈ ಪಾದಯಾತ್ರೆಯನ್ನು ' ಭಾರತ ಯಾತ್ರೆ' ಎಂದು ಕರೆದರು. ಪಾದಯಾತ್ರೆಯ ಮೂಲಕ ದೇಶದ ಜನರನ್ನು ಹತ್ತಿರದಿಂದ ನೋಡಿ ಅವರ ಸ್ಪಂದನೆಯನ್ನು ಗ್ರಹಿಸುವುದೇ ಅವರ ಮುಖ್ಯ ಗುರಿಯಾಗಿತ್ತು. ಆ ಮೂಲಕ ತಮ್ಮ ಪಕ್ಷಕ್ಕಾದ ಸೋಲನ್ನು ಅವಲೋಕಿಸುವ ಪ್ರಯತ್ನ ಅವರದ್ದಾಗಿರುತ್ತು.

ವೈ.ಎಸ್. ರಾಜಶೇಖರ ರೆಡ್ಡಿಯವರು ೨೦೦೩ ರಲ್ಲಿ ೬೦ ದಿನಗಳ ಕಾಲ್ನಡಿಗೆಯಲ್ಲಿ ೧೫೦೦ ಕಿಮಿ ಕ್ರಮಿಸಿ ಅಂದಿನ ಸರ್ಕಾರದ ಲೋಪಗಳನ್ನು ಜನರಿಗೆ ತಿಳಿಸುವ ಕೆಲಸಕ್ಕೆ ಕೈಹಾಕಿದ್ದರು. ಆಂಧ್ರಪ್ರದೇಶದ ಎಂಟು ಜಿಲ್ಲೆಗಳಲ್ಲಿ ಪಾದಯಾತ್ರೆಯ ಯಶಸ್ಸು ಅವರನ್ನು ಕಾಂಗ್ರೆಸ್ ಪಕ್ಷದ ಮುಂದಿನ ನಾಯಕನಾಗಿಯೂ ಬಿಂಬಿಸಿತು.

೨೦೦೪ರಲ್ಲಿ ತೆಲಗು ದೇಶಂ ಪಕ್ಷದ ಚಂದ್ರಬಾಬು ನಾಯ್ಡು ಕೂಡ ೧೧೭ ದಿನಗಳ ಪಾದಯಾತ್ರೆಯನ್ನು ಜನ ಸ್ಪಂದನೆಗಾಗಿಯೇ ಕೈಗೊಂಡಿದ್ದರು. ' ನಿಮಗಾಗಿ ಬರುತ್ತಿದ್ದೇನೆ' ಎಂಬ ಯಾತ್ರೆಯನ್ನು ರಾಜಕೀಯವಾಗಿ ಜನರ ಸಮ್ಮತಿಯನ್ನು ಪುಷ್ಟಿಗೊಳಿಸಲಿಕ್ಕಾಗಿಯೇ ಕೈಗೊಂಡರು. ೨೩೪೦ ಕಿಮಿ ಕ್ರಮಿಸುವಲ್ಲಿ ಅವರು ಹದಿಮೂರು ಜಿಲ್ಲೆಗಳನ್ನು ಕ್ರಮಿಸಿ ಪಕ್ಷಕ್ಕೆ ಸಾಕಷ್ಟು ಜನ ಬಲ ಗಳಿಸಿದರು. ಆಂಧ್ರ ಪ್ರದೇಶದ ಚರಿತ್ರೆಯಲ್ಲಿ ಈ ಬಗೆಯ ಹಲವಾರು ಪಾದಯಾತ್ರೆಗಳು ನಡೆದಿರುವುದನ್ನು ಗುರುತಿಸಬಹುದು. ಅವೆಲ್ಲವೂ ರಾಜಕೀಯ ಉದ್ದೇಶಕ್ಕಾಗಿಯೇ ನಡೆದಿರುವಂತಹವೇ ಆಗಿವೆ.

ರಾಜಸ್ಥಾನದ ರಾಜೇಂದ್ರ ಸಿಂಗ್ ಬಾಬು, ಹಿಮಾಚಲದ ಸುಂದರ್ ಲಾಲ್ ಬಹುಗುಣ, ಕರ್ನಾಟಕದ ಪಾಂಡರಂಗ ಹೆಗಡೆಯವರು ಪರಿಸರದ ಉಳಿವಿಗೆಂದೇ ಪಾದಯಾತ್ರೆಗಳನ್ನು ಕೈಗೊಂಡಿರುತ್ತಾರೆ. ಜನರಲ್ಲಿ ಕಾಳಜಿ ಮೂಡಿಸಲು ಹಾಗೂ ಸರ್ಕಾರದ ಗಮನ ಸೆಳೆಯುವ

ಸಲುವಾಗಿ ಸಾವಿರಾರು ಕಿಮಿ ಗಳನ್ನು ಕಾಲ್ನಡಿಗೆಯಲ್ಲಿಯೇ ಸವೆಸಿದ್ದಾರೆ. ' ಪಶ್ಚಿಮ ಘಟ್ಟ ಉಳಿಸಿ' ಅಭಿಯಾನವನ್ನು ೧೯೮೭ರಲ್ಲಿ ಪ್ರಾರಂಭಿಸಿ ದಕ್ಷಿಣದ ತುದಿಯಾದ ಕನ್ಯಾಕುಮಾರಿಯಿಂದ ಪ್ರಾರಂಭಗೊಂಡು ಗೋವಾದ ವರೆಗೂ ಹಾಗೂ ಗುಜರಾತಿನಿಂದ ಇನ್ನೊಂದು ತಂಡವು ದಕ್ಷಿಣಾಭಿಮುಖವಾಗಿ ಗೋವಾದವರೆಗೂ ಕಾಲ್ನಡಿಗೆಯಲ್ಲಿ ಬಂದು ಸೇರುವ ಅಭಿಯಾನ ಸುಮಾರು ೧೬೦ ಸ್ವಯಂಸೇವಾ ಸಂಸ್ಥೆಗಳನ್ನೊಳಗೊಂಡಿತ್ತು. ನೂರು ದಿನಗಳ ಈ ಅಭಿಯಾನದಲ್ಲಿ ತೊಂಭತ್ತೈದು ದಿನಗಳ ನಡಿಗೆ ಹಾಗೂ ಐದು ದಿನಗಳನ್ನು ಸಮ್ಮೇಳನಕ್ಕೆಂದು ಮುಡುಪಾಗಿಡಲಾಗಿತ್ತು. ದಕ್ಷಿಣದ ಐದು ರಾಜ್ಯದ ಪರಿಸರ ಕ್ಷೇತ್ರದಲ್ಲಿ ಹೊಸ ತಲೆಮಾರಿನ ಹೋರಾಟಗಾರರನ್ನು ಸೃಷ್ಟಿಸಿದ ಈ ಪಾದಯಾತ್ರೆಯು ಭಾರತದ ಸಂರಕ್ಷಣಾ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎನ್ನಿಸಿದೆ. ಇದೊಂದು ಜನಸಾಮಾನ್ಯರ ಚಳುವಳಿ ಎಂದು ಕಂಡು ಬಂದರೂ ಭಾರತ ಸರ್ಕಾರದ ಪರಿಸರ ಮಂತ್ರಾಲಯವು ಒಂದು ಪಾಲು ಧನಸಹಾಯ ಮಾಡಿ ಎಲ್ಲಾ ರಾಜ್ಯ ಸರ್ಕಾರಗಳ ಅರಣ್ಯ ಇಲಾಖೆಗಳು ಈ ಪಾದಯಾತ್ರೆಗೆ ತನ್ನ ಸಂಪೂರ್ಣ ಬೆಂಬಲ ನೀಡಲು ಸೂಚಿಸಿದ್ದು ವಿಶೇಷ ಎನಿಸಿತ್ತು.

ಕರ್ನಾಟಕ ರಾಜ್ಯದ ಸಂಪನ್ಮೂಲ ರಕ್ಷಣೆಗೆ ಜನರ ಗಮನ ಸೆಳೆದು, ಗಣಿಗಾರಿಕೆಯಲ್ಲಿ ಅಕ್ರಮ ನಡೆಸಿರುವ ಸರ್ಕಾರದ ವಿರುದ್ಧ ಸಮರ ಸಾರಲು ವಿರೋಧ ಪಕ್ಷದ ಸ್ಥಾನದಿಂದ 'ಬಳ್ಳಾರಿ ಚಲೋ' ಎಂದು ಕರೆ ನೀಡಿ ಹದಿನಾರು ದಿನಗಳ ಮುನ್ನೂರಿಪ್ಪತ್ತು ಕಿಮಿ ದೂರದ ಪಾದಯಾತ್ರೆಯನ್ನು ಸಿದ್ದರಾಮಯ್ಯನವರು ಕೈಗೊಂಡಿದ್ದರು. ಅಂತ್ಯದಲ್ಲಿ ೨ ಲಕ್ಷ ಜನರ ಸಭೆ ಸೇರಿದ್ದರು. ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದ ನಾಲ್ಕು ಗಣಿ ಧಣಿಗಳ ಭಷ್ಟಾಚಾರವನ್ನು ಬಯಲಿಗೆಳೆದದ್ದಲ್ಲದೆ ತನ್ನ ಪಕ್ಷದ ವರ್ಚಸ್ಸನ್ನು ಅವರು ಹೆಚ್ಚಿಸಿಕೊಂಡದ್ದನ್ನು ನಾವೆಲ್ಲರೂ ಕಂಡಿದ್ದೇವೆ. ಇದಾದ ನಂತರದ ಚುನಾವಣೆಯಲ್ಲಿ ಸಿದ್ದರಾಮಯ್ಯನವರು ಸ್ಪಷ್ಟ ಬಹುಮತದಿಂದ ಗೆದ್ದುಬಂದರು.

೨೦೧೬ರ ನಂತರ ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸಲು ಗುಜರಾತಿನಲ್ಲೊಂದು ಮುಖ್ಯವಾದ ಪಾದಯಾತ್ರೆ ನಡೆಯಿತು. ಆಗಸ್ಟ ೧೫ ರಂದು ೮೦೦ ಜನರು ರಸ್ತೆಗಿಳಿದು 'ದಲಿತ ಅಸ್ಮಿತಾ ಯಾತಾ' ಎಂಬ ಹೆಸರಿನಲ್ಲಿ ಅಹಮದಾಬಾದ್ ನಿಂದ ೩೮೦ ಕಿಮಿ ದೂರದಲ್ಲಿರುವ ಉನಾದವರೆಗೆ ಸಾಗಿದರು. ೧೦ ದಿನಗಳ ಈ ಪಾದಯಾತ್ರೆಗೆ ಕರೆಕೊಟ್ಟ ತರುಣ ಚಳುವಳಿಗಾರ ಜಿಗ್ನೇಶ್ ಮೇವಾನಿ ನೆರೆದ ದಲಿತರನ್ನು ಉದ್ದೇಶಿಸಿ ಮಾತನಾಡುತ್ತಾ ತಮ್ಮ ಕುಲ ಕಸುಬಾದ ಚಮ್ಮಾರಿಕೆಯನ್ನು ತೊರೆಯುವಂತೆ ಕರೆನೀಡಿ ಸರ್ಕಾರಕ್ಕೆ ಗಟ್ಟಿಯಾದ ಸಂದೇಶವನ್ನೇ ನೀಡಿದರು. ಅದಕ್ಕೆ ಮೂರು ವಾರಗಳ ಹಿಂದಷ್ಟೇ ನಾಲ್ಕು ದಲಿತ ಯುವಕರು ಸತ್ತ ದನದ ಚರ್ಮ ಸುಲಿಯುತ್ತಿದ್ದ ಸಂದರ್ಭದಲ್ಲಿ ಗೋರಕ್ಷಕಾ ಪಡೆ ಎಂದು ಕರೆದುಕೊಳ್ಳುವ ಯುವಕರ ಗುಂಪು ನಾಲ್ಕು ಜನರ ಬಟ್ಟೆ ಕಳಚಿ ಹೀನಾಯವಾಗಿ ಥಳಿಸಿದ್ದರು. ಅಷ್ಟೂ ಸಾಲದೆಂಬಂತೆ ಪೆಟ್ಟು ತಿಂದು ನರಳುವ ಯುವಕರ ದೃಶ್ಯಾವಳಿಯನ್ನು ಜಾಲತಾಣಗಳಲ್ಲಿ ಹರಿಬಿಟ್ಟು ಇಡೀ ದೇಶವೇ ತಲೆ ತಗ್ಗಿಸುವಂತೆ ಮಾಡಿತು. ಈ ಅಮಾನುಶ ಕೃತ್ಯವನ್ನು ವಿರೋಧಿಸಲು ಕೈಗೊಂಡ ಅಹಿಂಸಾ ಪಥದ ಪಾದಯಾತ್ರೆಗೂ ಅಸೂಯೆ ಪಡುವ ಬಣಗಳು ಇಲ್ಲದಿರಲಿಲ್ಲ. ಅಹಿಂಸಾ ಮಾರ್ಗದಲ್ಲಿ ನಡೆದ ಈ ಪಾದಯಾತ್ರೆ ಶಾಂತಿಯುತವಾಗಿಯೇ ಪೂರ್ಣಗೊಂಡರೂ, ಆ ನಂತರ ತಳವರ್ಗದ ಪಾದಯಾತ್ರಿಗಳ ಮೇಲೆ ಹಲ್ಲೆಗಳಾದವು. ಈ ಘಟನೆಗಳು ಗಾಂಧಿವಾದದ ಅನುಯಾಯಿಗಳಿಗಷ್ಟೇ ಅಲ್ಲದೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಎಲ್ಲರಿಗೂ ಜಿಗುಪ್ಸೆ ತಂದಿತು.

ಅದೇ ರೀತಿ ಸರ್ಕಾರಗಳು ಹಾಗೂ ಮಾಧ್ಯಮಗಳೂ ಕೂಡ ಇತ್ತೀಚಿನ ದಿನಗಳಲ್ಲಿ ಯಾರನ್ನು ಬೇಕಾದರೂ ಅಥವಾ ಯಾವ ಗುಂಪನ್ನು ಬೇಕಾದರೂ ತನಗಿಷ್ಟ ಬಂದಂತೆ ವರ್ಗೀಕರಿಸಿ ಅವರುಗಳ ಉದ್ದೇಶವನ್ನು ತಾನೇ ತೀರ್ಮಾನಿಸುತ್ತಿರುವ ಈ ದಿನಗಳಲ್ಲಿ ಸಾಮಾಜಿಕ ನ್ಯಾಯ ಎಂಬುದು ಇನ್ನಷ್ಟೂ ದೂರದ ಮರೀಚಿಕೆ ಆಗತೊಡಗಿದೆ.

ಈ ಬಗ್ಗೆ ಸಮಜಾಯಿಷಿ ಕೊಡುವುದು, ತನಿಖೆ ನಡೆಸುವುದು, ಆನಂತರ ಇನ್ಯಾರಿಗೋ ಶಿಕ್ಷೆ ಕೊಡುವುದು ಇತ್ತೀಚಿನ ದಿನಗಳಲ್ಲಿ ಯಾರೊಬ್ಬರೂ ಊಹಿಸಬಹುದಾದ ಚಿತ್ರ ಕತೆಯಂತಾಗಿದೆ ಎಂಬುದು ಬೇರೆಯದೇ ಸತ್ಯ. ಆದರೆ ಅಹಿಂಸಾ ಪಥದ ಪಾದಯಾತ್ರೆ ನಡೆಸುವವರ ಬಗ್ಗೆಯೂ ಅಸೂಯೆಪಡುವ ಕಾಲ ಬಂದಿದೆ. ಏಕೆಂದರೆ ಈ ಪಾದಯಾತ್ರೆಗಳಿಗೆ ಜನರನ್ನು ಸಂಘಟಿಸುವ ಶಕ್ತಿ ಇದೆ. ಈ ಪಾದಯಾತ್ರೆಗೆ ಯಾವ ಶಕ್ತಿಗಳ ಅಸಹಿಷ್ಣುತೆ ಕಾರಣವಾಗಿತ್ತೋ ಅಂತಹದೇ ಶಕ್ತಿಗಳು ಪಾದಯಾತ್ರೆಯ ನಂತರ ಚಳುವಳಿಕಾರರ ಮೇಲೆ ಹಿಗ್ಗಾ ಮುಗ್ಗ ದಾಳಿ ನಡೆಸಿರುವುದು ಈ ದೇಶದ ವಿಪರ್ಯಾಸವೇ ಸರಿ.

ಎಲ್ಲಕ್ಕಿಂತ ಸ್ಪಷ್ಟವಾಗಿ ಪಾದಯಾತ್ರೆಯ ನಿಜ ಶಕ್ತಿಯು ಕಂಡದ್ದು ಇತ್ತೀಚಿಗೆ ವಿದರ್ಭದಲ್ಲಿ ನಡೆದ ರೈತ ಚಳುವಳಿಯಲ್ಲಿ ಕಳೆದ ಎರಡು ದಶಕಗಳಲ್ಲಿ ೩ ಲಕ್ಷದಷ್ಟು ರೈತರ ಆತ್ಮಹತ್ಯೆಯನ್ನು ಕಂಡ ಪ್ರಾಂತ್ಯದಲ್ಲಿ ಸದ್ಯದ ಸರ್ಕಾರದ ಚುನಾವಣಾ ಪ್ರಣಾಳಿಕೆಯನ್ನು ನಡೆಸಿಕೊಡಲು ಮರೆತಾಗ ತನ್ನ ಬೇಡಿಕೆಯನ್ನು ಒತ್ತಾಯಿಸುವ ಸಲುವಾಗಿ ಬೀದಿಗಿಳಿಯುತ್ತಾರೆ . ಸುಮಾರ ೩೫ ಸಾವಿರ ರೈತರು ಕೆಂಪು ಟೋಪಿ ಧರಿಸಿ, ಕೆಂಪು ಧ್ವಜಗಳನ್ನು ಹಿಡಿದು ಆರು ದಿನಗಳ ಕಾಲ ೧೮೦ ಕಿಮಿ ದೂರದಲ್ಲಿರು ಮುಂಬೈ ಕಡೆಗೆ ಹಜ್ಜೆ ಹಾಕುತ್ತಾರೆ ಸುಡು ಬಿಸಿಲಿನಲ್ಲಿ ಕಾದ ಡಾಂಬರು ರಸ್ತೆಯ ಮೇಲೆ ಎಷ್ಟೋ ಜನರು ಬರಿಗಾಲಿನಲ್ಲಿ ನಡದು ದಣಿದರೂ ಅನ್ನ ನೀರಿಗಾಗಿ ಯಾರೊಬ್ಬರನ್ನೂ ಕೈಯೊಡ್ಡದ ರೈತರ ಈ ಸಂಯಮತೆ ಯಾವ ಮಾಧ್ಯಮದವರ ಕಣ್ಣಿಗೂ ಬೀಳಲಿಲ್ಲ. ನೀರು, ಆಹಾರ, ಪ್ರಥಮ ಚಿಕಿತ್ಸೆಗಳೆಲ್ಲಕ್ಕೂ ತಮ್ಮದೇ ಬಳಗವನ್ನು ಹೊಂದಿದ್ದ ಈ ಕಾಲದ ಗಾಂಧೀಯ ಪ್ರತಿನಿಧಿಯಾರೆಂದು ಅಂತಿಮ ದಿನದಂದು ಮಹಾರಾಷ್ಟ್ರ ಸರ್ಕಾರದ ಮಂತ್ರಿವರೇಣ್ಯರು ಪಾದಯಾತ್ರಿಗಳನ್ನ ಬಂದು ಭೇಟಿ ಮಾಡಿದ ಬಳಿಕ ಎಲ್ಲರೂ ಮೂಡಿದ ಪ್ರಶ್ನೆಯಾಯಿತು.

ಆಲ್ ಇಂಡಿಯಾ ಕಿಸಾನ್ ಸಭಾ ಎಂಬ ಸಂಘಟನೆ ಕಳೆದ ಮೂರುವರ್ಷಗಳಿಂದ ರೈತರ ಸಮಸ್ಯಗಳನ್ನು ಗಮನದಲ್ಲಿಟ್ಟು ಕೊಂಡು ಚಳುವಳಿಯನ್ನು ಕಟ್ಟಿತು. ಸಂಪೂರ್ಣ ಸಾಲ ಮನ್ನಾ ತಮ್ಮ ಬೆಳೆಗಳಿಗೆ ಸರಿಯಾದ ಬೆಲೆ ದೊರಕಿಸುವುದು, ಸ್ವಾಮಿನಾಥನ್ ವರದಿಯನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕು ಎಂಬ ಒತ್ತಾಯವನ್ನು ಇಟ್ಟುಕೊಂಡು ಈ ಪಾದಯಾತ್ರೆಯನ್ನು ಕೈಗೊಳ್ಳಲಾಯಿತು. ಭೂರಹಿತ ಆದಿವಾಸಿಗಳು ತಮಗಿದ್ದ ಅರಣ್ಯ ಹಕ್ಕುಗಳನ್ನು ಪಡೆಯಲು ನಡೆಸಿದ್ದ ಹೋರಾಟದ ಸೆಲೆಯು ಇದೇ ಚಳುವಳಿಯೊಂದಿಗೆ ಕೈಜೋಡಿಸಿತ್ತು.

ಚಳುವಳಿ ಆರನೇ ದಿನಕ್ಕೆ ಕಾಲಿಡುತ್ತಿದ್ದಂತೆ ಮುಂಬೈನ ಶ್ರೀಸಾಮಾನ್ಯರು ಆಹಾರ ನೀರುಗಳ ಸಮೇತ ರೈತರ ಕಡೆಗೆ ಬರುತ್ತಾರೆ, ಮುಂಬೈನ ವಾಹನ ಸಂಚಾರಕ್ಕೆ ಅಡ್ಡಿಯಾಗುವುದಲ್ಲಿ ಆ ದಿನ ನಡೆಯ ಬೇಕಿದ್ದ ಹತ್ತನೇ ತರಗತಿಯ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂಬ ಸಲುವಾಗಿ ರೈತರ ಪಾದಯಾತ್ರೆ ರಾತ್ರಿ ಇಡೀ ನಡೆದು ಮಾನವೀಯ ಮೌಲ್ಯಗಳನ್ನು ಮೆರೆಯುತ್ತಾರೆ. ಹಾಗಾಗಿ ಅವರಿಗೆ ಜನರ ಮನ್ನಣೆಯೂ ಸ್ವಷ್ಟವಾಗಿ ಒದಗಿ ಬರುತ್ತದೆ. ರೈತರು ವಿಧಾನಸೌಧದ ದಿಕ್ಕಿಗೆ ನಡೆಯುವ ಮುನ್ನವೇ ಸಂಬಂಧಪಟ್ಟ ಮಂತ್ರಿವರ್ಯರೆಲ್ಲಾ

ಅಜಾದ್ ಮೈದಾನಕ್ಕೆ ಬಂದು ಅವರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ. ರೈತರು ತಮ್ಮ ಊರಿಗೆ ಮರಳಲು ವಿಶೇಷ ರೈಲಿನ ವ್ಯವಸ್ಥೆಯೂ ಆಗುತ್ತದೆ. ಪ್ರೊ. ವಿಜುಕೃಷ್ಣನ್, ಡಾ. ಅಶೋಕ್ ದಾವಲೆ, ಡಾ. ಅಜಿತ್ ನಾವಲೆ ಮುಂತಾದವರು ಎಲ್ಲಾ ಎಡ ಪಂಥದ ಎಲ್ಲಾ ಸಂಘಟನೆಗಳನ್ನು ಒಗ್ಗೂಡಿಸಿ ಒಂದು ಯುದ್ಧವನ್ನೇ ಗೆದ್ದ ಖುಷಿಯಲ್ಲಿದ್ದಾರೆ. ಇವರ ಬೇಡಿಕೆಗಳು ಸಂಪೂರ್ಣವಾಗಿ ಈಡೇರುವುದನ್ನು ನಾವು ಕಾದು ನೋಡಬೇಕಿದೆ.

ಪಾದಯಾತ್ರೆಗಳು ಜನರನ್ನು ಸಂಘಟಿಸಬಲ್ಲ, ಅಸ್ಪಷ್ಟ ನಂಬಿಕೆಗಳನ್ನು ಒಡೆಯಬಲ್ಲ ಜನರ ನಡುವಿನ ಸಂವಾದವನ್ನು ಏರ್ಪಡಿಸಿಕೊಡುತ್ತದೆ. ಮನುಷ್ಯ ದೈಹಿಕವಾಗಿ ಮತ್ತು ಮಾನಸಿಕವಾಗಿ ನಿರಾಯುಧವಾದಾಗ ಮಾತ್ರ ಶಾಂತಿಯುತವಾದ ಕ್ರಿಯಾತ್ಮಕವಾದ ಘರ್ಷಣೆಗಳಲ್ಲದ ಪರಿಹಾರ ಒದಗಬಲ್ಲದು. ಇನ್ನು ಪಾದಯಾತ್ರೆ ಸಂಘಟಕರಿಗೆ ಅವರವರ ಸ್ವಸಾಮರ್ಥ್ಯಕ್ಕೆ ಪರೀಕ್ಷೆಯಾಗಿ ಹಿಡಿದ ಕನ್ನಡಿಯಾಗಿ ಅವರವರ ಉದ್ದೇಶಗಳಿಗೆ ಮುಂದೇನೆಂಬ ದಾರಿ ತೋರುವ ಸರಳ ಸಾಧನವಾಗಿದೆ. ಇವನ್ನೆಲ್ಲಾ ಪೂರ್ಣ ಅರಿತು ಹೆಜ್ಜೆ ಇಡಬಲ್ಲವನಿಗೆ ಪಾದಯಾತ್ರೆಯೊಂದು ಸಾಮಾಜಿಕ ಬದಲಾವಣೆಗೆ ಬಳಸಬಹುದಾದ ಬಹು ಮುಖ್ಯ ಅಸ್ತ್ರ ಎಂಬುದರಲ್ಲಿ ಎರಡು ಮಾತಿಲ್ಲ. ●

ಚಿಪ್ಕೋ ಚಳುವಳಿಗೆ ೪೫ ವರ್ಷ

ಎಲ್ಲಾ ಕಾಲದಲ್ಲೂ ಅಹಿಂಸಾತ್ಮಕ ಚಳುವಳಿಗಳ ಬಗ್ಗೆ ಜನ ಸಾಮಾನ್ಯರಿಗೆ ನಂಬಿಕೆ ಇಲ್ಲ. ಅದು ಗಾಂಧಿ ಕಾಲಕ್ಕೆ ಮುಗಿದು ಹೋಯಿತು. ಈ ಕಾಲದಲ್ಲಿ ಅಹಿಂಸೆ ಚಾಲ್ತಿಗೆ ತರಲಾಗದ ನಾಣ್ಯ. ಗಾಂಧಿ ಬದುಕಿದ್ದರೂ ಈಗ ಅಹಿಂಸೆಯನ್ನು ಬಳಸಲು ಆಗುತ್ತಿರಲಿಲ್ಲ ಎಂಬ ಮಾತನ್ನು ಆಗಾಗ ಕೇಳುತ್ತಲೇ ಇರುತ್ತೇವೆ. ಆದರೆ ಅಹಿಂಸೆಯ ಹೋರಾಟಗಳು ನಡೆಯುತ್ತಲೇ ಇವೆ. ಸ್ವಾತಂತ್ರಾ ನಂತರ ಭಾರತದಲ್ಲಿ ನಡೆದ ಪ್ರಮುಖ ಅಹಿಂಸಾತ್ಮಕ ಚಳುವಳಿ 'ಚಿಪ್ಕೋ' ಚಳುವಳಿ. ಇಡೀ ದೇಶದಲ್ಲಿ ಸಂಚಲನ ಉಂಟು ಮಾಡಿದ, ಜಾಗತಿಕ ಮಟ್ಟದಲ್ಲಿ ಗಮನ ಸೆಳೆದ ಚಳುವಳಿ 'ಚಿಪ್ಕೋ' ಚಳುವಳಿ. ಚಿಪ್ಕೋ ಚಳುವಳಿ ನಡೆದು ಈ ತಿಂಗಳಿಗೆ ೪೫ ವರ್ಷ. ಹಿಮಾಲಯದ ತಪ್ಪಿನಲ್ಲಿ ೧೯೭೦ ರಲ್ಲಿ ಎಲ್ಲಿಲ್ಲದಂತೆ ಗುತ್ತಿಗೆದಾರರು ನೂರಾರು ವರ್ಷದ ಮರಗಳನ್ನು ಕಡಿಯಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಸ್ಥಳೀಯ ಜನರನ್ನು ಒಗ್ಗೂಡಿಸಿ ಮರಗಳ ಸಂರಕ್ಷಣೆಗೆ ಹುಟ್ಟಿಕೊಂಡ ಚಳುವಳಿ 'ಚಿಪ್ಕೋ' ಚಳುವಳಿ. ಈ ಚಳುವಳಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ವಿಶೇಷ.

ಗುತ್ತಿಗೆದಾರರು ಮರಗಳನ್ನು ಉರುಳಿಸದಂತೆ ಚಿಪ್ಕೋ ಚಳುವಳಿಗಾರರು ಕಾಡಿಗೆ ನುಗ್ಗಿ, ದೊಡ್ಡ, ದೊಡ್ಡ ಮರಗಳನ್ನು ಅಪ್ಪಿ ನಿಂತರು. ಮರವನ್ನು ಕಡಿಯುವುದಿದ್ದರೆ ನಮ್ಮ ಸಮೇತ ಕಡಿಯಿರಿ ಎಂದು ಕರೆ ಕೊಟ್ಟರು. ೧೯೭೩ ರಲ್ಲಿ ಪಾರಂಭವಾದ ಸತ್ಯಾಗ್ರಹ ೧೯೭೪ ರಲ್ಲಿ ಹೊರ ಪ್ರಪಂಚದ ಅರಿವಿಗೆ ಬಂದಿತು. ೧೯೭೪ ರಲ್ಲಿ ಗೌರಾದೇವಿ ಕದ್ದು ಮುಚ್ಚಿ ಮರ ಕಡಿಯುತ್ತಿದ್ದ ಗುತ್ತಿಗೆದಾರರೊಂದಿಗೆ ಮುಖಾಮುಖಿಯಾಗಿ ತನ್ನ ಸಂಗಡಿಗರೊಂದಿಗೆ ಕಾಡಿನಲ್ಲಿ ಪಟ್ಟಾಗಿ ಕುಳಿತು ಗುತ್ತಿಗೆದಾರರನ್ನು ಜಾಗ ಖಾಲಿ ಮಾಡಿಸಿದ್ದು ಒಂದು ಅಪೂರ್ವ ಘಟನೆಯಾಯಿತು. ಜೆ ಪಿ ಯವರ ಅನುಯಾಯಿ ಚಂಡಿ ಪ್ರಸಾದ್ ಭಟ್ ತಮ್ಮ ಆಶ್ರಮದ ಸುತ್ತ ಮುತ್ತಲ ಗ್ರಾಮದಲ್ಲಿ ಮರಗಳ ಹನನ ತೀವ್ರಗತಿಯಲ್ಲಿ ಆಗುತ್ತಿರುವುದನ್ನು ಗಮನಿಸಿ ಸ್ಥಳೀಯ ಜನರನ್ನು ಸಂಘಟಿಸಿ ಈ ಹೋರಾಟವನ್ನು ನಡೆಸಿದ್ದರು. ಈ ಹೋರಾಟವನ್ನು ಇಡೀ ಹಿಮಾಲಯ ತಪ್ಪಲಿನ ೪೫೦೦ ಕಿಮಿ ಉದ್ದಕ್ಕೂ ಪಾದಯಾತ್ರೆಯ ಮೂಲಕ ಸುಂದರಲಾಲ್ ಬಹುಗುಣ ಅವರು ತೆಗೆದು ಕೊಂಡು ಹೋಗಿ ಬ್ರಹತ್ ಯೋಜನೆಗಳ ಕಾರಣಕ್ಕಾಗಿ ಅಪಾಯದ ಅಂಚಿಗೆ ತಲುಜಪಿರುವ ಹಿಮಾಲಯದ ತಪ್ಪಲಿನ ಬಗ್ಗೆ ಸ್ಥಳೀಯರ ಮತ್ತು ಸರ್ಕಾರದ ಗಮನ ಸೆಳೆದರು. ಇದರಿಂದಾಗಿ ಅಂದಿನ ಇಂದಿರಾ ಗಾಂದಿ ಸರ್ಕಾರ ಹಿಮಾಲಯದ ತಪ್ಪಲಿನಲ್ಲಿ ಮುಂದಿನ ೧೫ ವರ್ಷ ಮರಗಳನ್ನು ಕಡಿಯದಂತೆ ಆದೇಶ ಹೊರಡಿಸಿತು.

ಚಿಪ್ಕೋ ಚಳುವಳಿ ಪರಿಸರ ವಿಚಾರವನ್ನು ಹೋರಾಟಗಳಲ್ಲಿ ಮುನ್ನೆಲೆಗೆ ತಂದ ಚಳುವಳಿ. ಈ ಚಳುವಳಿಯಿಂದ ದೇಶದಲ್ಲೆ ಮುಂದೆ ನಡೆದ ಬೃಹತ್ ಯೋಜನೆಗಳ ವಿರುದ್ಧದ ಹೋರಾಟಗಳು, ಅಣು ಸ್ಥಾವರದ ವಿರುದ್ಧದ ಹೋರಾಟಗಳು, ಈ ಚಳುವಳಿಯಿಂದ ಪ್ರೇರಣೆ ಪಡೆದವು. ಅನೇಕ ವಿದ್ವಾಂಸರು ಪರಸರ ವಿನಾಶದ ವಿಷಯವನ್ನು ಗಂಭಿರವಾಗಿ ಪರಿಗಣಿಸಿ ಅದರ ಅಧ್ಯನದಲ್ಲಿ ತೊಡಗಿದರು. ●

ನಿಲುವು

ಲಿಂಗಾಯತ ಧರ್ಮದ ಜವಾಬ್ದಾರಿ ಏನು ?

ಹಿಂದೂ ಧರ್ಮದಿಂದ ಪ್ರತ್ಯೇಕಗೊಂಡು ಲಿಂಗಾಯತ ಸ್ವತಂತ್ರ ಧರ್ಮವಾಗಬೇಕೆಂಬ ಕೂಗಿಗೆ ರಾಜ್ಯ ಸರ್ಕಾರ ಮನ್ನಣೆ ನೀಡಿದೆ. ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿ ಮನ್ನಣೆಗಾಗಿ ಕಡತವನ್ನು ಹೊತ್ತು ಹಾಕಿದೆ. ಹಿಂದೂ ಧರ್ಮದಿಂದ ಬೇರೆ ಹೋಗಬೇಕೆನ್ನುವ ಲಿಂಗಾಯತರು ಪ್ರತ್ಯೇಕಗೊಳ್ಳಬೇಕೆನ್ನುವ ವಿಚಾರ ಇಂದು ನಿನ್ನೆಯದಲ್ಲ, ಈ ಹೋರಾಟಕ್ಕೆ ನೂರಾರು ವರ್ಷಗಳ ಇತಿಹಾಸವಿದೆ ಎಂದು ಪ್ರತಿಪಾದಿಸುತ್ತಾ ಬಂದಿದ್ದಾರೆ. ಲಿಂಗಾಯತ ಧರ್ಮ ಒಂದು ಜೀವನ ವಿಧಾನ ಎಂದು ಕೆಲವು ಲಿಂಗಾಯತ ನಾಯಕರು ಮಾತನಾಡಿದ್ದು ಮಾಧ್ಯಮದಲ್ಲಿ ಬಂದಿದೆ. ಲಿಂಗಾಯತರನ್ನು ಹಿಂದೂ ಧರ್ಮದಲ್ಲೇ ಉಳಿಸಿಕೊಳ್ಳಬೇಕೆಂಬ ಪ್ರಯತ್ನಗಳೂ ಬೇಕಾದಷ್ಟು ನಡೆದಿವೆ. ಇಂದು ಒಂದು ಧರ್ಮದ ಭಾಗವಾಗಿರುವ ಜನ, ನಾಳೆ ಪ್ರತ್ಯೇಕಗೊಳ್ಳುತ್ತಲೇ ಅವರ ನಡೆ-ನುಡಿಗಳು, ಚಿಂತನೆಗಳು ಬದಲಾಗುತ್ತವೆ ಎಂದು ಆಶಿಸುವುದು ಬಹಳ ಬಾಲಿಶವೆನಿಸುತ್ತದೆ. ಇಂದು ಲಿಂಗಾಯತ ಧರ್ಮದ ಪ್ರತ್ಯೇಕತೆಗೆ ಇರುವ ಬಲವಾದ ಕಾರಣ ಲೌಕಿಕ ಅನುಕೂಲ ಎಂಬುದು ಸಾಮಾನ್ಯ ಸತ್ಯ. ಇದರ ಹಿಂದಿನ ಉದ್ದೇಶ 'ಅಲ್ಪ ಸಂಖ್ಯಾತರು' ಎಂಬ ಹಣೆ ಪಟ್ಟಿ ಪಡೆಯುವುದೇ ಆಗಿದೆ. ಅಲ್ಪ ಸಂಖ್ಯಾತರು ಎಂದು ಗುರುತಿಸಲ್ಪಟ್ಟ ಕೂಡಲೆ ಸರ್ಕಾರದ ಸವಲತ್ತುಗಳೊಂದಿಗೆ ಸಿಗುವ ಕಾನೂನಿನ ಶ್ರೀರಕ್ಷೆಗಳು ಕೂಡ ಲಭ್ಯವಾಗುತ್ತಾ ಹೋಗುತ್ತವೆ. ಕಳೆದ ಒಂದು ವರ್ಷದ ಆಗುಹೋಗುಗಳನ್ನು ಗಮನಿಸಿದರೆ ಲಿಂಗಾಯತ ಧರ್ಮ ವೈದಿಕ ಧರ್ಮವಲ್ಲ, ಹಾಗಾಗಿ ಪ್ರತ್ಯೇಕ ಧರ್ಮ ಆಗಬೇಕೆಂಬುದು ಚಾಲ್ತಿಯಲ್ಲಿದ್ದ ಚರ್ಚೆ. ಹಿಂದೂ ಧರ್ಮದ ಭಾಗವಾಗಿ ಬಸವ ತತ್ವವನ್ನು ಅನುಸರಿಸಲು ಆಗುತ್ತಿರುವ ಅನಾನುಕೂಲತೆಯ ಬಗೆಗಿನ ಚರ್ಚೆ ಎಲ್ಲಿಯೂ ಆಗಲಿಲ್ಲ. ಏಕೆಂದರೆ ಈ ಆಧುನಿಕ ಜಗತ್ತಿನಲ್ಲಿ ಎಲ್ಲ ಧರ್ಮೀಯರ ಮನೋಭಾವವೂ ಒಂದೇ ಆಗಿದೆ. ಎಲ್ಲ ಧರ್ಮೀಯರಿಗೂ ಅಧಿಕಾರ, ಧನ ಮತ್ತು ಸವಲತ್ತುಗಳೇ ಮುಖ್ಯವಾಗಿವೆ.

ಹೀಗಿದ್ದೂ ಲಿಂಗಾಯತರು ಪ್ರತ್ಯೇಕ ಧರ್ಮವಾಗಿ ಹೋಗುವಾಗ ಅವರಿಗೆ ಪ್ರಪಂಚಕ್ಕೆ ಹೊಸ ದಾರಿ ತೋರುವ ಅವಕಾಶ ಸಹಜವಾಗಿ ಒದಗಿ ಬಂದಿದೆ. ಬಸವ ತತ್ವ ಮತ್ತು ಆ ತತ್ವಕ್ಕೆ ಆಧಾರ ಎನ್ನುತ್ತಿರುವ ವಚನಗಳ ಚಿಂತನೆಗಳು ಇಡೀ ಪ್ರಪಂಚದ ಸಮಸ್ಯೆಗಳಿಗೆ ಉತ್ತರವನ್ನು ಹೊಂದಿವೆ. ಇಡೀ ಬಸವ ವಿಚಾರ ಶ್ರಮ ಸಂಸ್ಕೃತಿಯ ಪರವಾಗಿರುವಂತಹದು. ಶ್ರಮದ ಅನುಭವದ ಹಿನ್ನೆಲೆಯಲ್ಲಿ ಹೆಚ್ಚಿನ ವಚನಗಳು ಸೃಷ್ಟಿಯಾದವು. ಪ್ರತಿಯೊಂದು ವಚನವೂ ದೈಹಿಕ ಶ್ರಮ, ಬೆವರಿನ ವಾಸನೆ ಮತ್ತು ಅನುಭವದ ಮೂಸೆಯಿಂದ ಸೃಷ್ಟಿಯಾದದ್ದಾಗಿದೆ. ಹಾಗಾಗಿ ವಚನಗಳನ್ನು ಅಷ್ಟು ಸುಲಭವಾಗಿ ಟೀಕೆ ಮಾಡಲು, ಲೇವಡಿ ಮಾಡಲು ಸಾಧ್ಯವಿಲ್ಲ. ಬಸವೇಶ್ವರರು ಆಡಿದ ಬಹು ದೊಡ್ಡ ಅನುಭವದ, ಜ್ಞಾನಿಯ ಮಾತು ಕಾಯಕವೇ ಕೈಲಾಸ ಎಂಬುದು. ಕಾಯಕ ಎಂದರೆ ಗುತ್ತಿಗೆ ಕೆಲಸವಲ್ಲ, ಶಿಕ್ಷಣ ಸಂಸ್ಥೆಗಳನ್ನು ನಡೆಸುವುದಲ್ಲ,

ಕಂಪ್ಯೂಟರ್ ಮುಂದೆ ಕುಳಿತು ಮಾಡುವ ಕೆಲಸವಲ್ಲ, ಸರ್ಕಾರಿ ಉದ್ಯೋಗವಲ್ಲ, ಕಾರ್ಪೊರೇಟ್ ಕಂಪನಿಗಳಿಗೆ ದುಡಿಯುವುದಲ್ಲ. ನಗರಗಳಿಗೆ ಸೇರುವುದಲ್ಲ, ರಾಜಕಾರಣಿಯಾಗುವುದಲ್ಲ. ಬದಲಿಗೆ ಮಾನವನಾಗುವುದು. ಮಾನವೀಯತೆಯನ್ನು ಮುನ್ನೆಲೆಗೆ ತರುವುದು. ಇಂದು ಪ್ರಪಂಚದ ದೊಡ್ಡ ಸಮಸ್ಯೆ ಎಂದರೆ ಮಾನವತೆಯಿಂದ ಮತ್ತು ಶ್ರಮ ಸಂಸ್ಕೃತಿಯಿಂದ ಇಡೀ ಪ್ರಪಂಚ ದೂರ ಸರಿಯುತ್ತಾ ಹೋಗುತ್ತಿರುವುದು ಆಗಿದೆ. ಶ್ರಮ ಸಂಸ್ಕೃತಿಯಿಂದ ದೂರ ಸರಿದದ್ದೆ ಶೋಷಣೆಗೆ ಕಾರಣವಾಗಿದೆ. ಶ್ರಮವನ್ನು ಬಿಟ್ಟು ಬೇರೇನನ್ನೂ ಕೇಳದಿದ್ದ ನಮ್ಮ ಪಾರಂಪರಿಕ ಕೃಷಿ ಮತ್ತು ಇತರ ಗ್ರಾಮೋದ್ಯೋಗಗಳು ಮುಗ್ಗರಿಸಲು ಪ್ರಾರಂಭಿಸಿದ್ದೇ ನಮ್ಮ ರೈತರು ಮತ್ತು ಕಾಯಕ ಜೀವಿಗಳು ಶ್ರಮವನ್ನ ತಪ್ಪಿಸಿಕೊಳ್ಳಲು ಯೋಚಿಸದ ದಿನವೇ ಆಗಿದೆ. ತಂತ್ರಜ್ಞಾನಗಳು ನಮಗೆ ಆಮಿಷ ತೋರಿದವು ಎಂಬುದು ಒಂದು ವಾದವಾದರೂ ನಾವು ನಮ್ಮ ಬಸವಣ್ಣನವರು ಹೇಳಿಕೊಟ್ಟ ಕಾಯಕ ತತ್ವಕ್ಕೆ ಬದ್ಧರಾಗಿರಲಿಲ್ಲ ಎಂಬುದನ್ನು ಅಲ್ಲಗಳೆಯಲಾಗದು. ಈ ವಾದವನ್ನು ಎಲ್ಲ ಕ್ಷೇತ್ರಕ್ಕೂ ವಿಸ್ತರಿಸುತ್ತಾ ಹೋಗಬಹುದು. ನಾವು ಬಸವಣ್ಣನನ್ನು ಮರತೆದ್ದೇ ಇಂದಿನ ಎಲ್ಲಾ ಅವಘಡಗಳಿಗೆ ಕಾರಣ.

ಇದನ್ನು ಬಿಟ್ಟು ಸಮಯಾನುಕೂಲಕ್ಕಾಗಿ ಬಸವತತ್ವದ ಅನುಯಾಯಿಗಳು ಎಂದು ಕೊಂಡವರೆಲ್ಲರನ್ನೂ ಒಗ್ಗೂಡಿಸಿ ಮತ್ತೊಂದು ಧರ್ಮವಾದರೆ ಏನು ಅನುಕೂಲ? ಈ ಹೋರಾಟದ ಸಂದರ್ಭದಲ್ಲಿ ಲಿಂಗಾಯತ ರಾಜಕಾರಣಿಗಳನ್ನು ಬಿಡಿ, ಲಿಂಗಾಯತ ಧರ್ಮದ ಗುರುಗಳೂ ಕೂಡ ಪ್ರತ್ಯೇಕ ಧರ್ಮವಾದ ಮೇಲೆ ಲಿಂಗಾಯತರು ಹೇಗೆ ಬದುಕಬೇಕು? ಬಸವತತ್ವದ ಮೌಲ್ಯಗಳನ್ನು ಹೇಗೆ ಮತ್ತೆ ರೂಢಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಮಾತನಾಡಲಿಲ್ಲ. ಇನ್ನು ಮುಂದಾದರೂ ಲಿಂಗಾಯತ ಮಠಗಳಲ್ಲಿ ಭಕ್ತರು ಬಂದೊಡನೆ ಕಾಯಕ ಕೈಗೊಳ್ಳಲೇ ಬೇಕಾದ ಅನಿವಾರ್ಯತೆಯ ವಾತಾವರಣ ಮಠದ ಆವರಣದಲ್ಲಿ ಇರುವಂತೆ ನೋಡಿಕೊಳ್ಳಬೇಕು. ಮಠದ ಜಾಗಗಳಲ್ಲಿ ಕಟ್ಟಡ ಕಟ್ಟುವ ಬದಲು ಅಲ್ಲಿ ಭಕ್ತರು ಸಾವಯವದಲ್ಲಿ ಅನ್ನ ಬೆಳೆಯಲು ಅವರ ಶ್ರಮವನ್ನು ಬಳಸಿಕೊಳ್ಳಬೇಕು. ಮಠದ ಆವರಣದಲ್ಲಿ ಎಲ್ಲಾ ಕುಶಲಕರ್ಮಿಗಳು ವೈಭವದಿಂದ ನಡೆಯುವಂತೆ ನೋಡಿ ಕೊಳ್ಳಬೇಕು. ಭಕ್ತಾದಿಗಳು ಸ್ವಯಂಪ್ರೇರಣೆಯಿಂದ ಅವುಗಳನ್ನು ಕೊಳ್ಳುವಂತೆ ಮಾಡಬೇಕು ಮತ್ತು ಆ ಕಸುಬನ್ನು ಕಲಿಯಲು ಭಕ್ತರಿಗೆ ಅವಕಾಶ ಇರಬೇಕು, ಭಕ್ತರು ಕೊಳ್ಳುಬಾಕ ಸಂಸ್ಕೃತಿಗೆ ತುತ್ತಾಗದಂತೆ ನೋಡಿಕೊಳ್ಳಬೇಕು. ನಗರಗಳಿಂದ ದೂರ ಸರಿದು ಹಳ್ಳಿಗೆ ಹಿಂದಿರುಗಿ ಸುಸ್ಥಿರ ಕೃಷಿ ಮತ್ತು ಗ್ರಾಮೋದ್ಯೋಗಗಳಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕು. ಅವರ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಓದಿ, ಅಚ್ಚ ಕನ್ನಡದ ವಚನಗಳು ಅವರ ಬದುಕಿನ ಭಾಗವಾಗುವಂತೆ ನೋಡಿಕೊಳ್ಳಬೇಕು. ಲಿಂಗಾಯತ ಧರ್ಮ ಜಾಗತೀಕರಣದ ಹುನ್ನಾರದಿಂದ ಮಾನವಕೋಟಿಯನ್ನು ಬಿಡುಗಡೆ ಮಾಡುವ ಧರ್ಮವಾಗಬೇಕು. ಆಗಷ್ಟೇ ೧೨ ನೇ ಶತಮಾನದಲ್ಲಿ ರಚನೆಯಾದ ಅತ್ಯಂತ ಪ್ರಭಾಯುತವಾದ ವಚನಗಳು ಮತ್ತೊಮ್ಮೆ ಸೃಷ್ಟಿಯಾದಾವು.

ಬಸವ ತತ್ವ ಕನ್ನಡ ಮಣ್ಣಿನಲ್ಲಿ ಹುಟ್ಟಿದ ತತ್ವ. ನಾವು ಬಸವ ತತ್ವದ ಅನುಯಾಯಿಗಳು ಎಂದು ಘೋಷಿಸಿ ಕೊಳ್ಳುತ್ತಿರುವವರ ಜನಸಂಖ್ಯೆ ಒಂದು ಕೋಟಿಗೂ ಕಡಿಮೆ. ಇಷ್ಟೇ ಜನರು ಸಾಕು ಪ್ರಪಂಚದ ಏಳುನೂರು ಕೋಟಿ ಜನರಿಗೆ ಸರಿಯಾದ ದಾರಿ ತೋರಲು. ಈ ಕನ್ನಡದ ಜನ ನಿಜಕ್ಕೂ ಬಸವ ತತ್ವದ ಪರಿಪಾಲನೆಗೆ ಹಿಂದೂ ಧರ್ಮದ ಕಟ್ಟುಪಾಡುಗಳು ತೊಂದರೆಯಾಗುತ್ತಿದೆ ಎಂದರೆ ಹೊರಹೋಗುವುದೇ ಸರಿ. ಹೊರಹೋದ ಮೇಲೆ ಅವರು ನೂರಕ್ಕೆ ನೂರು ಬಸವ ತತ್ವದ

ಅನುಯಾಯಿಗಳಾಗಿ ಶ್ರಮ ಸಂಸ್ಕೃತಿಗೆ ಮರಳಿ, ಶ್ರಮದ ಸರಳ ಬದುಕಿನಲ್ಲಿ ಇರುವ ಸುಖವನ್ನು ಇಡೀ ಪ್ರಪಂಚಕ್ಕೆ ತಿಳಿಸಿಕೊಟ್ಟರೆ, ಈ ಕಾಲಘಟ್ಟದಲ್ಲಿ ಅವರು ಇದಕ್ಕಿಂತ ದೊಡ್ಡ ಉಪಕಾರವನ್ನು ಲೋಕಕ್ಕೆ ಮಾಡಲಾರರು. ಪ್ರಪಂಚಕ್ಕೆ ರುಜುಮಾರ್ಗವನ್ನು ಮತ್ತೆ ತೋರಿಸಿಕೊಟ್ಟವರು ನಮ್ಮ ಕನ್ನಡಿಗರು ಎಂದು ಎಲ್ಲ ಕನ್ನಡಿಗರೂ ಹೆಮ್ಮೆ ಪಟ್ಟಾರು. ಗಾಂಧಿಯವರು ಸೂಚಿಸಿದ ಸಾಮಾಜಿಕ ಸಪ್ತ ಪಾತಕಗಳನ್ನು ಬಸವತತ್ವ ೧೨ ನೇ ಶತಮಾನದಲ್ಲಿಯೇ ಗುರುತಿಸಿದೆ. ಅದನ್ನು ಬಸವತತ್ವ ಅನುಯಾಯಿಗಳು ಪಾಲಿಸಿ ತೋರಿಸಬೇಕಾದ ಅನಿವಾರ್ಯತೆ ಇಂದು ಪ್ರಪಂಚಕ್ಕಿದೆ. ಪ್ರಪಂಚದಲ್ಲಿ ೪೨೦೦ ಧರ್ಮಗಳಿವೆ ಎಂದು ಅಂಕಿ ಅಂಶಗಳು ಹೇಳುತ್ತಿವೆ. ಬಸವ ತತ್ವವನ್ನು ಈ ತತ್ವದ ಅನುಯಾಯಿಗಳು ಪಾಲಿಸದಿದ್ದರೆ ಅದು ಕೇವಲ ೪೨೦೧ ನೇ ಧರ್ಮವಾಗುತ್ತದೆ ಅಷ್ಟೆ. ಅವರ ಹೋರಾಟ ಧರ್ಮಕಾರಣವಾಗದೇ ರಾಜಕಾರಣವಾಗುತ್ತದೆ. ತಮಗೆ ಒದಗಿ ಬಂದಿರುವ ಪ್ರಪಂಚಕ್ಕೆ ಮಾದರಿಯಾಗುವ ಅಪೂರ್ವ ಅವಕಾಶವನ್ನು ಲಿಂಗಾಯತರು ಕಳೆದು ಕೊಳ್ಳಬಾರದಷ್ಟೆ. ●

ತಿಂಗಳ ಕವನಕ್ಕೊಂದು ಟಿಪ್ಪಣಿ

'ಅರಿತರೆ ಶರಣ, ಮರೆತರೆ ಮಾನವ' ಎಂಬುದು ಬಸವಣ್ಣನವರ ಒಂದು ಪ್ರಸಿದ್ಧ ಹೇಳಿಕೆ. ಈ ಹೇಳಿಕೆಯಲ್ಲಿ ಬಸವಣ್ಣನವರ ಶ್ರದ್ಧಾಕೇಂದ್ರವಾಗಿದ್ದ ಶರಣತತ್ತ್ವ ಮತ್ತು ಅವರ ಸಮಾಜ ಸುಧಾರಣಾ ಪ್ರವೃತ್ತಿ ಎರಡೂ ಅಡಕವಾಗಿವೆ. ಸಾಮಾನ್ಯ ಮನುಷ್ಯ ತನ್ನಲ್ಲಿರುವ ಲೋಪದೋಷಗಳನ್ನು ಅರ್ಥಮಾಡಿಕೊಳ್ಳುವುದಿಲ್ಲ; ಜೊತೆಗೆ ತನ್ನ ಕರ್ತವ್ಯಗಳನ್ನು ಮರೆಯುತ್ತಾನೆ. ಇವೆಲ್ಲವನ್ನು ಮೀರಿ ಅರಿವಿನ ಬೆಳಕಿನಲ್ಲಿ ಮೇಲೇರುವಾತ ನಿಜವಾದ ಶರಣನಾಗುತ್ತಾನೆ ಇದು ಬಸವಣ್ಣನವರ ಸಂದೇಶ. ಅವರು ಉಪದೇಶಿಸಿದ ಶರಣಧರ್ಮಕ್ಕೆ ಭಾವನೈರ್ಮಲ್ಯ, ಸೌಜನ್ಯ, ಸದಾಚಾರ ಮತ್ತು ಸಂಪೂರ್ಣ ಶರಣಾಗತಿ ಎಂಬವು ನಾಲ್ಕು ಮೆಟ್ಟಿಲುಗಳು ಎಂದು ಸ್ಥೂಲವಾಗಿ ವಿಶ್ಲೇಷಿಸಬಹುದು. ಇಲ್ಲಿನ ಒಂದೊಂದು ಮೆಟ್ಟಿಲನ್ನೇರುವುದೂ ಸಾಮಾನ್ಯರ ಪಾಲಿಗೆ ಸುಲಭದ ಕೆಲಸವೇನಲ್ಲ.

ಹಸುವಿನ ಎದುರು ಹಚ್ಚಹಸುರಾದ ಹುಲ್ಲು ಕಾಣಿಸಿದರೆ, ಅದು ಹುಲ್ಲನ್ನು ತಿನ್ನಲು ಮುನ್ನುಗ್ಗುತ್ತದೆ. ಹಾಗೆಯೇ ಮನುಷ್ಯನ ಎದುರು ಪಂಚೇಂದ್ರಿಯಗಳನ್ನು ಆಕರ್ಷಿಸುವ ವಸ್ತು ಸಂಗತಿಗಳಿದ್ದರೆ, ಆತನ ಮನಸ್ಸು ವಿಚಲಿತಗೊಳ್ಳುತ್ತದೆ. ಅಂಥ ವ್ಯಕ್ತಿ ಶರಣನಾಗಲಾರ. ಭಾವಶುದ್ಧಿಯನ್ನು ಎಟುಕಿಸಿಕೊಳ್ಳಬೇಕಾದರೆ ಮನಸ್ಸು ವಿಷಯರಹಿತವಾಗಿರಬೇಕು. ನಿರಂತರ ಆತ್ಮಾವಲೋಕನದಿಂದ ಮಾತ್ರ ಇದು ಸಾಧ್ಯ. ಆದ್ದರಿಂದಲೇ ಬಸವಣ್ಣನವರು ತನಗೆ 'ಸುಬುದ್ಧಿಯೆಂಬ ಉದಕವನೆರೆದು' ಆತ್ಮನಿಯಂತ್ರಣಕ್ಕೆ ಅಗತ್ಯವಾದ ಶಕ್ತಿಯನ್ನು ಕೊಡುವಂತೆ ಶಿವನಲ್ಲಿ ಪ್ರಾರ್ಥಿಸುತ್ತಾರೆ.

ನಮ್ಮ ಅಂತರಂಗದ ಶುಚಿತ್ವ ನಮ್ಮ ನಡೆನುಡಿಗಳಲ್ಲೂ ಪ್ರಕಟವಾಗಬೇಕಾದುದು ಅನಿವಾರ್ಯ. ಸಮಾಜಜೀವಿಯಾದ ಮನುಷ್ಯ ತನ್ನ ಸಹಜೀವಿಗಳೊಡನೆ ಸೌಜನ್ಯದಿಂದ ವರ್ತಿಸಿದಾಗ ಮಾತ್ರ ಸಮಾಜದಲ್ಲಿ ಆಪ್ತಭಾವ ಮೂಟಿಯುತ್ತದೆ. ಸಭ್ಯ ಸಂಸ್ಕೃತಿಯಿಂದ ಯಾರಿಗೂ ನಷ್ಟವಾಗುವುದಿಲ್ಲ. ದರ್ಪ, ಅಹಂಕಾರ ಮಾನವೀಯತೆಯ ಲಕ್ಷಣಗಳಲ್ಲ. ಮನೆಗೆ ಬಂದವರನ್ನು ಪ್ರೀತಿಯಿಂದ 'ಹದುಳವಿದ್ದಿರೆ?' ಎಂದು ಕೇಳುವುದು ಸಭ್ಯರ ಗುಣ, ಶರಣನಲ್ಲಿ ಈ ಗುಣವಿರಲೇಬೇಕು ಎನ್ನುತ್ತಾರೆ ಬಸವಣ್ಣ.

'ಆಚಾರವೇ ಸ್ವರ್ಗ, ದುರಾಚಾರವೇ ನರಕ' ಎಂಬ ನಿಚ್ಚಳ ಅರಿವು ಶರಣಧರ್ಮದ ಮೂರನೆಯ ಮೆಟ್ಟಿಲು. ಬಸವಣ್ಣನವರ ಪ್ರಕಾರ ದೇವಲೋಕವೆಂಬುದು ಒಂದು ಗಗನಕುಸುಮವಲ್ಲ. ಸತ್ಯವನ್ನು ನುಡಿದಾಗ ಭೂಮಿಯೇ ದೇವಲೋಕವಾಗುತ್ತದೆ. ಸುಳ್ಳು ಮತ್ತು ಅನಾಚಾರಗಳಿಂದ ಈ ನೆಲ ನರಕವಾಗುತ್ತದೆ. ಶುದ್ಧ ಆಚರಣೆ, ಶುದ್ಧ ಚಾರಿತ್ರ್ಯಗಳಿಂದ ಮನುಷ್ಯ ಸಂಪೂರ್ಣ ಶರಣಾಗತಿಯನ್ನು ಎಟುಕಿಸಿಕೊಳ್ಳುತ್ತಾನೆ. ಈ ಹಂತ ತಲುಪಿದ ವ್ಯಕ್ತಿ ಭಗವಂತನಿಗೆ ತ್ರಿಕರಣಪೂರ್ವಕವಾಗಿ ತನ್ನನ್ನು ಅರ್ಪಿಸಿಕೊಳ್ಳುತ್ತಾನೆ. ತನ್ನ ದೇಹವನ್ನು ದೇವವೀಣೆಯನ್ನಾಗಿ ಮಾಡಿಕೊಂಡು 'ಉರದಲೊತ್ತಿ ಬಾರಿಸು' ಎಂದು ಭಗವಂತನನ್ನು ಪ್ರಾರ್ಥಿಸುತ್ತಾನೆ. ನಿಜವಾದ ಶರಣ ಸಕಲರಿಗೂ ಲೇಸನ್ನೇ ಬಯಸುತ್ತಾ, ವಿಶ್ವಮಾನವನಾಗುತ್ತಾನೆ. •

– ಎನ್. ಶ್ರೀನಿವಾಸ ಉಡುಪ



೧೦೦ ವರ್ಷದ ಹಿಂದೆ ಗಾಂಧಿ

ಏಪ್ರಿಲ್ ೧೯೧೮

ಏಪ್ರಿಲ್ ೧ ನೇ ತಾರೀಖು ಗಾಂಧಿ ಖೇಡಾದಲ್ಲಿ ಪ್ರವಾಸ ಪ್ರಾರಂಭಿಸಿದ್ದಾರೆ. ಖೇಡಾ ರೈತರನ್ನು ಯಾವುದೇ ಕಾರಣಕ್ಕೂ ತೆರಿಗೆ ಪಾವತಿಸದಿರಲು ಅಣಿಗೊಳಿಸುತ್ತಿದ್ದಾರೆ.

ಅವರ ಅತ್ಯಂತ ನೆಚ್ಚಿನ ಕಾರ್ಯದರ್ಶಿ ಮಹದೇವ ದೇಸಾಯಿ ಗಾಂಧಿಯವರನ್ನು ಸೇರಿ ಕೇವಲ ೫ ತಿಂಗಳಾಗಿದೆ. ೨೫ ವರ್ಷದ ಆ ಯುವಕನನ್ನು ತಮ್ಮೊಂದಿಗೆ ಖೇಡಾಕ್ಕೆ ಗಾಂಧಿ ಕರೆತಂದಿದ್ದಾರೆ. ಮಹದೇವ ದೇಸಾಯಿ ಅಚ್ಚುಕಟ್ಟಾಗಿ ಕೆಲಸ ಮಾಡುವದು ಕಲಿತು ಗಾಂಧಿಯವರ ಮನ ಗೆದ್ದಿದ್ದಾರೆ. ಮಹದೇವ ದೇಸಾಯಿಯವರ ಪತ್ನಿ ದುರ್ಗಾ ಚಂಪಾರಣ್ಯದಲ್ಲಿ ಕಸ್ತೂರ ಬಾ ಸಂಗಡ ಇದ್ದಾರೆ. ಅಲ್ಲಿ ಅವರು ಗಾಂಧಿ ಪ್ರಾರಂಭಿಸಿರುವ ಶಾಲೆಯಲ್ಲಿ ಸ್ವಯಂಸೇವಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಗಾಂಧಿಗೆ ಈ ನವದಂಪತಿಗಳನ್ನು ಬೇರೆ ಮಾಡಿರುವುದಕ್ಕೆ ಏನು ಅನ್ನಿಸಿದೆಯೋ ಏನೋ ಚಳುವಳಿಯ ನಡುವೆ ಬಿಡುವುಮಾಡಿಕೊಂಡು ದುರ್ಗಾ ಅವರಿಗೆ ಪತ್ರ ಬರೆಯುತ್ತಾರೆ. ದುರ್ಗಾ ಅವರಿಗೆ ಇನ್ನು ೧೬ ವರ್ಷ. ನನ್ನ ಊಹೆಗೂ ಮೀರಿ ನೀನು ಮಹದೇವನಿಂದ ದೂರ ಉಳಿಯಬೇಕಾಗಿ ಬಂದಿದೆ. ನಾನು ಮಹದೇವನಿಗೆ ನಿನಗೆ ಯಾವಾಗ ಇಲ್ಲಿಂದ ಹೋಗಬೇಕು ಅನಿಸುತ್ತದೋ ಆಗ ಮರು ಯೋಚನೆ ಮಾಡದೆ ನಿನ್ನಲ್ಲಿಗೆ ಹೋಗು ಎಂದಿದ್ದೇನೆ. ನೀನು ಅವನನ್ನು ಈಗಲೇ ಕಳುಹಿಸು ಅಂದರೂ ಕಳುಹಿಸುತ್ತೇನೆ. ಮಹದೇವ್ ಇಲ್ಲಿ ಅಪಾರವಾದ ಅನುಭವ ಪಡೆಯುತ್ತಿದ್ದಾನೆ. ಆ ಅನುಭವದಲ್ಲಿ ನಿನಗೂ ಪಾಲಿದೆ. ಈ ಮಾತಿನಿಂದ ನಿನ್ನ ವಿರಹ ವೇದನೆ ಕಡಿಮೆಯಾಗಬಹುದೆಂದು ಭಾವಿಸಿದ್ದೇನೆ. ಆದರೂ ಚಳುವಳಿಯೂ ಇನ್ನೂ ತೀವ್ರಗೊಳ್ಳುವ ಸಂಭವ ಹೆಚ್ಚಾಗಿ ಇರುವುದರಿಂದ ಮಹದೇವ ಈಗಲೇ ಚಂಪಾರಣ್ಯಕ್ಕೆ ಹೋಗಿ ನಿನ್ನನ್ನು ನೋಡಿ ಬರುವುದು ವಾಸಿ ಅನಿಸುತ್ತಿದೆ ಎಂದು ಬರೆಯುತ್ತಾರೆ.

ಅಂದೇ ಮಹದೇವ ದೇಸಾಯಿಯವರ ತಂದೆ ಹರಿಭಾಯಿ ದೇಸಾಯಿಯವರಿಗೂ ಪತ್ರ ಬರೆದು ಮಹದೇವನನ್ನು ನನ್ನೊಂದಿಗೆ ಕಳುಹಿಸಿ ತಪ್ಪು ಮಾಡಿದೆ ಎಂದು ಕೊಳ್ಳಬೇಡಿ. ಅವನ ವ್ಯಕ್ತಿತ್ವ ಸುಧಾರಣೆಗೆ ಖೇಡಾದ ಈ ಅನುಭವ ಆತನಿಗೆ ಬೇಕಿತ್ತು.

ಅತ್ತ ಚಂಪಾರಣ್ಯದಲ್ಲಿ ಮಗನಲಾಲ್ ದಂಪತಿಗಳ ನಡುವೆ ಸಣ್ಣ ಘರ್ಷಣೆ ನಡೆಯುತ್ತಿದೆ. ಈ ಬಗ್ಗೆ ಕಸ್ತೂರ ಬಾ ಅವರಿಗೆ ಪತ್ರ ಬರೆದು ಮಗನ್ ಲಾಲ್ ಮತ್ತು ಅವನ ಹೆಂಡತಿಯ ನಡುವಿನ ಮನಸ್ತಾಪವನ್ನು ಬಗೆಹರಿಸಲು ಸೂಚಿಸುತ್ತಾರೆ.

ಒಬ್ಬ ಹೋರಾಟಗಾರ ಒಳಗಿನ ಸಮಸ್ಯೆಗಳನ್ನು ಸದಾ ಆದ್ಯತೆಯ ಮೇಲೆ ನಿರ್ವಹಿಸಬೇಕಾದ ಅನಿವಾರ್ಯತೆ ಈ ತಿಂಗಳಲ್ಲಿ ಗಾಂಧಿಯ ಬದುಕನ್ನು ಗಮನಿಸಿದರೆ ಕಾಣುತ್ತದೆ.

ತಿಂಗಳ ಚಿತ್ರ



ಸುಂದರಲಾಲ್ ಬಹುಗುಣ ಅವರು ಹೊಸ ಜೀವನ ದಾರಿಗೆ ಬಂದಿದ್ದ ಸಂದರ್ಭದಲ್ಲಿ ತೆಗೆದ ಚಿತ್ರ.
ಚಿತ್ರ ಸಂಗ್ರಹದಿಂದ

Janapada Vichara *Kannada Monthly Digest*
Janapada Seva Trust, Melkote, Dist-Mandya-571431
Tel: 08236 299854 email: janapada@yahoo.com
web: www.janapada.org
Printed at Chandragiri Printers,
Mandya Mob: 9945651584, 9739743237

KA/SK/MND/470/2015-17
Regd No KAR/KAN/2000/382C

ಜನಪದ ವಿಚಾರ
ಚಂದಾ ವಿವರ
ವಾರ್ಷಿಕ ಚಂದಾ ; ರೂ ೩೦೦.೦೦
ಕಳುಹಿಸಿದ ಬೇಕಾದ ವಿಳಾಸ :
ಜನಪದ ಸೇವಾ ಟ್ರಸ್ಟ್,
ಮೇಲುಕೋಟೆ ೫೭೧೪೩೧, ಮಂಡ್ಯ ಜಿಲ್ಲೆ.

ಬ್ಯಾಂಕ್ ಮೂಲಕ ಕಳುಹಿಸುವವರಿಗೆ :
ಬ್ಯಾಂಕ್: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೇಲುಕೋಟೆ ಶಾಖೆ.
ಉಳಿತಾಯ ಖಾತೆ ಸಂಖ್ಯೆ 54034091793
ಐ ಎಫ್ ಎಸ್ ಸಿ : SBIN0040042